ಜೀವನ ಮಾಡಬೇಕಾಗಿರುವುದರಿಂದ ಬೆಳಕಾದರೆ ಅವರಿಗೆ ಬೇರೆ ಪ್ರಶ್ನೆ ಇಲ್ಲ. ಸಮುದ್ರ ಕೊರೆತಕ್ಕೆ ಯಾವತ್ತು ಅವರ ಮನೆಗಳು ನುಚ್ಚು ನೂರಾಗಿ ಹೋಗುವ ಸಾಧ್ಯತೆ ಇರುವುದರಿಂದ ಸರ್ಕಾರ ತೀವ್ರ ಗಮನ ಕೊಟ್ಟು ಈ ಕ್ಷೇತ್ರದಲ್ಲಿ ಸಮುದ್ರ ತಡೆ ಗೋಡೆಗಳನ್ನು ಅತ್ಯಂತ ಅವಶ್ಯಕವಾಗಿ ಜರೂರಾಗಿ ನಿರ್ಮಿಸಬೇಕೆಂದು ನಾನು ಒತ್ತಾಯ ಮಾಡುತ್ತಾ ಬಹುಶಃ ಬಹಳಷ್ಟು ವಿಚಾರಗಳು ಉಂಟು. ತಾವು ಕೊಟ್ಟ ಸಮಯಕ್ಕೆ ಸರಿಯಾಗಿ ನಾನು ಮುಗಿಸುತ್ತಿದ್ದೇನೆ. ಮೀನುಗಾರಿಕಾ ನಿಗಮವನ್ನು ಪುನಃಶ್ಚೇತನ ಮಾಡಿ ಮೀನುಗಾರರ ಮಹಿಳೆಯರಿಗೆ ಬೇರೆ ಬೇರೆ ವಿಧದ ಸವಲತ್ತು ಕಾರ್ಯಕ್ರಮಗಳನ್ನು ಶಾಲೆ ಅಥವಾ ತಿಳುವಳಿಕೆಗಳನ್ನು ಕೊಟ್ಟು ಅವರು ಸಮಾಜವನ್ನು ಅಥವಾ ಅವರ ಜೀವನ ಪದ್ಧತಿಯನ್ನು ಮೇಲಕ್ಕೆ ತರಬೇಕಾದಲ್ಲಿ ಕರ್ನಾಟಕ ರಾಜ್ಯಸರ್ಕಾರ ಒತ್ತು ಕೊಡಬೇಕೆಂದು ವಿನಂತಿ ಮಾಡಿ ನನಗೆ ತಾವು ಅನುಮತಿ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಶ್ರೀ ವಾಸುದೇವನ್‌ರವರು ಜೈಲಿಗೆ ಹೋಗಿರುವ ಬಗ್ಗೆ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಸಿಕ್ಕಿರುವಂತಹ ಸರಿಯಾದ ಮಾಹಿತಿ ಪ್ರಕಾರ 10.45ಕ್ಕೆ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ ಹಾಗೆ ಪೋಲೀಸ್ ಕಮೀಷನರ್ ಅವರನ್ನು ಅರೆಸ್ಟ್ ಮಾಡಿ ವಾಸುದೇವನ್‌ರವರು ಸೆಂಟ್ರಲ್ ಜೈಲಿಗೆ ಹೋಗಿದ್ದಾರೆ. ಇದು ನಮಗೆ ಬಂದಿರುವ ಮಾಹಿತಿ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತಾಗ 10.45ಕ್ಕೆ ಈ ಘಟನೆ ನಡೆದಿದ್ದರೆ ಈ ಸದನವನ್ನು ತಾವು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾಗಿತ್ತು. ಸತ್ಯ ಸಂಗತಿಯನ್ನು ತಾವು ತಿಳಿಸಬೇಕಾಗಿತ್ತು. ನಮಗೆಲ್ಲರಿಗೂ ಆತಂಕ ತಂದಿರುವಂತಹ ಸಂಗತಿ ಎಂದರೆ, ಒಬ್ಬ ಪ್ರಾಮಾಣಿಕ ಅಧಿಕಾರಿ ಯಾವುದೇ ಅಪರಾಧ ಮಾಡದೆ ಅವರು ಜೈಲಿಗೆ ಹೋಗುವಂತಹ ಪರಿಸ್ಥಿತಿ ಏನಿದೆ, ಬಹುಶಃ ಈ ನಾಡಿನ ಜನ ತಲೆ ತಗ್ಗಿಸುವಂಥದ್ದು ಮಾಡಿದ್ದೀರಿ. ಇಡೀ ದೇಶದ ಜನ ನಮಗೆ ಛೀಮಾರಿ ಹಾಕುವಂತಹ ಒಂದು ಪರಿಸ್ಥಿತಿಯನ್ನು ತಂದಿಟ್ಟಿದ್ದೀರಿ. ಇವತ್ತು ನೈತಿಕ ಹೊಣೆ ಹೊತ್ತು ನಿಮ್ಮ ಸರ್ಕಾರ ರಾಜೀನಾಮೆ ಕೊಡಬೇಕಾಗುತ್ತದೆ. ಅವರು ಜೈಲಿಗೆ ಹೋಗಿದ್ದರೆ. ಅದು ವಾಸುದೇವನ್ ಅಲ್ಲ ಜೈಲಿಗೆ ಹೋಗಬೇಕಾಗಿರುವುದು. ಮುಖ್ಯ ಮಂತ್ರಿಗಳು ಹೋಗುತ್ತೀರೋ, ಉಪ ಮುಖ್ಯಮಂತ್ರಿಗಳು ಹೋಗುತ್ತೀರೋ, ಅಥವಾ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತಿರೋ, ನಮಗೆ ಗೊತ್ತಿಲ್ಲ. ಮತ್ತು ಈ ಒಂದು ಹಿನ್ನೆಲೆಯಲ್ಲಿ ಏನೆಲ್ಲಾ ಹೇಳಬೇಕೋ ಮುಂಚೆಯೇ ಹೇಳಿದ್ದೇವೆ.

15 ದಿವಸಗಳ ಮುಂಚೆ ನಾನು ಕಾಲಿಂಗ್ ಅಟೆನೆಷನ್ ಕಳುಹಿಸಿಕೊಟ್ಟಿದ್ದೆ. ಸರ್ಕಾರದ ಗಮನವನ್ನು ಸೆಳೆಯುವಂತಹ ಪ್ರಯತ್ನ ಮಾಡಿದ್ದೆ. ಅವತ್ತು ಸದನ ಮುಂದೂಡಿ ಮುಖ್ಯಮಂತ್ರಿಗಳು ಮಾಡುವಂತಹ ಎಲ್ಲಾ ಪ್ರಯತ್ನಕ್ಕೆ ನಮ್ಮ ಸಹಕಾರ ಇದೆ ಎಂದು ಹೇಳಿ ನಮ್ಮೆಲ್ಲರ ಸಹಕಾರವನ್ನು ಕೊಟ್ಟಿದ್ದೇವೆ. ಆದರೆ ಇವತ್ತು ನಿಮ್ಮ ದೌರ್ಬಲ್ಯದಿಂದ ಯಾರಿಗೋ ಒಂದು ಪ್ರಮೋಷನ್ ಕೊಡಬೇಕು ಎನ್ನುವ ಕಾರಣಕ್ಕೋಸ್ಕರ ಸುಪ್ರೀಂ ಕೋರ್ಟ್ ಆದೇಶವನ್ನು ನಿರ್ಲಕ್ಷ್ಯ ಮಾಡಿ ಇಡೀ ದೇಶದಲ್ಲಿ ಈ ತರಹ ಘಟನೆ ಮೊದಲ ಬಾರಿಗೆ ಆಗಿದೆ. ಒಬ್ಬ ಅಧಿಕಾರಿ ಜೈಲಿಗೆ ಹೋಗುವಂತಹ ಒಂದು ಅಕ್ಷಮ್ಯ ಅಪರಾಧ ತಮ್ಮ ಸರ್ಕಾರದಿಂದ ಆಗಿರುವುದರಿಂದ ದಯಮಾಡಿ ತಾವು ಹೇಳಿಕೆಯನ್ನು ಕೊಡಬೇಕು. ಅಲ್ಲಿಯವರೆಗೆ ನಾವು ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ. ಇಲ್ಲದೆ ಹೋದರೆ ನಾವು ಸದನದಿಂದ ಹೊರಗಡೆ ಹೋಗುತ್ತೇವೆ. ವಾಸ್ತವಿಕ ಸತ್ಯಾ ಸತ್ಯತೆಯ ಬಗ್ಗೆ ಉಪ ಮುಖ್ಯಮಂತ್ರಿಗಳು

ಹೇಳಿಕೆಯನ್ನು ಕೊಡಬೇಕು. ನನಗೆ ಬಂದಿರುವ ಮಾಹಿತಿ ಅದು ಸತ್ಯ ಆದರೆ ಒಂದು ಕ್ಷಣ ಸಹ ನೀವು ಅಧಿಕಾರದಲ್ಲಿ ಮುಂದುವರೆಯುವಂತಹ ಹಕ್ಕು ಇಲ್ಲ. ನೀವು ರಾಜೀನಾಮೆ ಕೊಟ್ಟು ಮನೆಗೆ ಹೋಗಿ. ಜನರ ಎದುರು ಚುನಾಯಿತ ಸರ್ಕಾರ ಹೀಗೆ ಇದೆ ಎಂದು ಹೇಳಿಕೊಳ್ಳುವುದಕ್ಕೆ ನಮಗಂತೂ ನಾಚಿಕೆಯಾಗುತ್ತದೆ. ನೀವು ಒಬ್ಬ ಜೆ.ಹೆಚ್. ಪಟೇಲ್‌ರಂತಹ ಒಬ್ಬ ವ್ಯಕ್ತಿ ಉಪ ಮುಖ್ಯಮಂತ್ರಿಯಾಗಿರುವಂತಹ ಕಾಲದಲ್ಲಿ ಈ ಅಪರಾಧಕ್ಕೆ ನಮ್ಮ ಸರ್ಕಾರ ಜವಾಬ್ದಾರಿ ಎಂದು ಹೇಳಿ ನೀವು ಆ ಜವಾಬ್ದಾರಿಯನ್ನು ವಹಿಸಿಕೊಂಡು ಈ ಸರ್ಕಾರವನ್ನು ವಿಸರ್ಜನೆ ಮಾಡಬೇಕು. ತಾವು ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಜನರ ಮುಂದೆ ಹೊಸದಾಗಿ ಚುನಾವಣೆಯನ್ನು ಎದುರಿಸುವುದಕ್ಕೆ ಹೋಗೋಣ. ನಿಮ್ಮಂತಹವರು ಒಂದು ಕ್ಷಣ ಸಹ ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕು ಇಲ್ಲ. ಇಡೀ ಅಧಿಕಾರಿ ವರ್ಗ ಕೇವಲ ಕರ್ನಾಟಕ ರಾಜ್ಯವಲ್ಲ ಇಡೀ ದೇಶದಲ್ಲಿ ಜನ ನಿಮ್ಮ ಸರ್ಕಾರಕ್ಕೆ ಛೀಮಾರಿ ಹಾಕುತ್ತಿದ್ದಾರೆ. ನಾವು ತಲೆ ತಗ್ಗಿಸುವಂತಹ ಒಂದು ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ದಯಮಾಡಿ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿ ನಂತರ ಕಾರ್ಯಕಲಾಪ ಮುಂದುವರೆಸೋಣ.

ಶ್ರೀ ವೈ. ರಾಮಕೃಷ್ಣ : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು 10.45 ಗಂಟೆಗೆ ಈ ಘಟನೆ ನಡೆದಿದ್ದರೂ ಕೂಡ ಸಭೆ ಇಲ್ಲಿ ನಡೆಯುತ್ತಿದ್ದರೂ ಕೂಡ ಸಭೆಯ ಗಮನಕ್ಕೆ ತಾವು ತರಬಹುದಾಗಿತ್ತು. ತಮಗೆ ಗೊತ್ತಿದೆ, situation ಯಾವ ಕಡೆ ಎಲ್ಲಿತ್ತು ಎಂದು. ನಮಗೆ ಏನಾಗಿದೆ ಎಂದು ಹೇಳಿ ನಿಮಿಷ ನಿಮಿಷಕ್ಕೂ ನಮಗೆ ಆತಂಕವಾಗುತ್ತಿದೆ. ಇನ್ನು ಯಾವ ವಿಚಾರದಲ್ಲಿ ಆತನನ್ನು ಉಳಿಸಬೇಕು. ಆದ್ದರಿಂದ ನಮ್ಮ ರಾಜಕ್ಕೆ ಕೆಟ್ಟ ಹೆಸರು ಬರಬಾರದು ಎಂದು ಹೇಳಿ ನಮಗೆ ಆತಂಕವಾಗುತ್ತಿದೆ. ತಾವು ಇಷ್ಟು ಹೊತ್ತಾದರೂ ಕೂಡ ಸಭೆಯ ಗಮನಕ್ಕೆ ತರದೆ, ಮುಗುಮ್ಮಾಗಿ ಇಟ್ಟುಕೊಂಡು ವಿರೋಧ ಪಕ್ಷದ ನಾಯಕರು ಎದ್ದಾಗ ತಾವು ಗಮನ ಕೊಟ್ಟಿದ್ದು ನಿಜವಾಗಿಯೂ ಇದು ಶೋಚನೀಯವಾದಂತಹ ವಿಚಾರ. ಒಂದು ವೇಳೆ ಅದು ನಿಜವಾದರೆ ಮುಂದಿನ ಕ್ರಮ ಏನು? You have to own the responsibility. It is a censure against the Government and not against the official. You have no moral right to remain in the Government. There is no other alternative but to resign immediately.

+ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಮತ್ತೊಂದು ವಿಷಯ ಅಡಕವಾಗಿದೆ. ಬಹಳ ದುಃಖವಾದ ಸಂಗತಿ ಎಂದರೆ ವಾಸುದೇವನ್ ಅವರಿಗೆ ಕಂಟೆಂಪ್ಟ್ ಆಫ್ ಕೋರ್ಟ್‌ನಲ್ಲಿ ಪನಿಶ್‌ಮೆಂಟ್ ಆಗಿದ್ದುದು ಒಂದು ಕಡೆ ಆದರೆ, ಮುಖ್ಯಮಂತ್ರಿಗಳು ಮುಖ್ಯ ನ್ಯಾಯಾಧೀಶರನ್ನು ಹೋಗಿ ಈ ಸಂದರ್ಭದಲ್ಲಿ ಭೇಟಿಯಾಗುತ್ತಾರೆ ಎಂದರೆ ಅದಕ್ಕಿಂತ ಅವಮಾನವಾದ ಸಂಗತಿ ಇಲ್ಲ. ಅದು ನಿಜವಾಗಿಯೂ ಕೂಡ ಕಂಟೆಂಪ್ಟ್ ಆಫ್ ದ ಹೌಸ್ ಅಥವಾ ಕಂಟೆಂಪ್ಟ್ ಆಫ್‌ದ ಕೋರ್ಟ್, ಅದೂ ಕೂಡ ಕ್ರಿಮಿನಲ್ ಕಂಟೆಂಪ್ಟ್ ಆಫ್ ದ ಕೋರ್ಟ್ ಆಗುತ್ತದೆ. ಈ ವಿಷಯದಲ್ಲಿ ಕೂಡ ಹೋಗಬಾರದಾಗಿತ್ತು. ಆದರೂ ಕೂಡ ಕರ್ನಾಟಕಕ್ಕೆ ಅವಮಾನವಾಗುತಕ್ಕಂತಹ ಸಂಗತಿ. ಮುಖ್ಯಮಂತ್ರಿಗಳು, ಮುಖ್ಯ ನ್ಯಾಯಾಧೀಶರನ್ನು ಈ ಸಂದರ್ಭದಲ್ಲಿ ನೋಡುತ್ತಾರೆ ಎಂದರೆ, ಅದಕ್ಕಿಂತ ಬಹಳ ನೋವಾಗತಕ್ಕಂತಹ, ಬಹಳ ಕೆಟ್ಟ ಸಂಪ್ರದಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು, ತಂದು ಹಾಕಿದ್ದಾರೆ. ಅದಕ್ಕೋಸ್ಕರ ಅವರು ತಕ್ಷಣ ರಾಜೀನಾಮೆ ಕೊಡಬೇಕಾದುದು ಅತಿ ಅವಶ್ಯಕ. ಇದರ ಬಗ್ಗೆ ತಕ್ಷಣ ಅವರು ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ನೀವು ಹೇಳುತ್ತೀರಿ, ಅದೇ ನ್ಯಾಯಾಧೀಶರು ಸ್ವತಂತ್ರ್ಯ ರಾವ್ ಎಂಬ ನ್ಯಾಯಾಧೀಶರನ್ನು ನೋಡುವುದಕ್ಕೆ

ಹೋದರೆ ಕಂಟೆಂಪ್ಟ್ ಆಫ್ ದಿ ಕೋರ್ಟ್ ಆಗುತ್ತದೆ ಎಂದು ಅವರಿಗೆ ನೋಟಿಸ್ ಕೊಟ್ಟರು. ನಾನು ಇವತ್ತು ಕೇಳುತ್ತಿದ್ದೇನೆ, ಮುಖ್ಯಮಂತ್ರಿಗಳೇ ಹೋಗಿ ಮುಖ್ಯ ನ್ಯಾಯಾಧೀಶರನ್ನು ಈ ಸಂದರ್ಭದಲ್ಲಿ ಭೇಟಿಯಾಗುತ್ತಾರೆ ಎಂದರೆ ಇದು ಕಂಟೆಂಪ್ಟ್ ಆಫ್ ಕೋರ್ಟ್ ಆಗುವುದಿಲ್ಲವೇ ಎನ್ನುವ ವಿಷಯ ಸಾರ್ವಜನಿಕರು ಮಾತನಾಡತಕ್ಕಂತಹ ವಿಷಯವಾಗಿದೆ.

ಆದ್ದರಿಂದ ದಯವಿಟ್ಟು, ಇವತ್ತು ಮಾನ್ಯ ಉಪಮುಖ್ಯ ಮಂತ್ರಿಗಳಿದ್ದಾರೆ, ಇದರ ಬಗ್ಗೆ ಒಂದು ವಿಶಾದವಾದಂತಹ ವಿಷಯ ಇದು. ಇದು ಸಾಧಾರಣವಾದ ವಿಷಯ ಅಲ್ಲ. ನಿಜವಾಗಿಯೂ ಕೂಡ ಗಂಭೀರವಾದಂತಹ ವಿಷಯ. ಮುಖ್ಯಮಂತ್ರಿಗಳು ಖಂಡಿತವಾಗಿ ಈ ಸಂದರ್ಭದಲ್ಲಿ ನ್ಯಾಯಾಧೀಶರನ್ನು ನೋಡುವುದಕ್ಕೆ ಹೋಗತಕ್ಕಂತಹ ಸಂದರ್ಭ ಇರಲಿಲ್ಲ. ಅಪ್ಲಿಕೇಷನ್ ಹಾಕಬೇಕಾಗಿತ್ತು, ರಿಟ್ ಹಾಕಬೇಕಾಗಿತ್ತು, ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತು, ಸೆಕೆಂಡ್ ರಿವ್ಯೂ ಹಾಕಬಹುದಾಗಿತ್ತು, ಹತ್ತಾರು ರಿವ್ಯೂಗಳನ್ನು ಸುಪ್ರೀಂ ಕೋರ್ಟಿನಲ್ಲಿ ಹಾಕತಕ್ಕಂತಹ ಪರಿಸ್ಥಿತಿ ಇದೆ. ಇವತ್ತು ಹಾಕುವುದಕ್ಕೆ ಬರುವುದಿಲ್ಲ ಎಂದು ಅಲ್ಲ. ನೀವು ಅಧ್ಯಕ್ಷರಿಗೆ ಅಪ್ಲಿಕೇಷನ್ ಕೊಟ್ಟಿರಬಹುದು, ಅರ್ಜಿ ದಾಖಲು ಮಾಡಿರಬಹುದು. ಪ್ರಧಾನ ಮಂತ್ರಿಗಳನ್ನು ನೋಡಿರಬಹುದು, ಆದರೆ ಕೋರ್ಟಿಗೆ ಹೋಗತಕ್ಕಂತಹ ಸಂದರ್ಭದಲ್ಲಿ ನ್ಯಾಯಾಧೀಶರನ್ನು ಯಾರೇ ಆಗಲಿ, ಎಷ್ಟೇ ಅಧಿಕಾರ ಇರತಕ್ಕಂತಹವರಾಗಲಿ, ಅವರು ಹೋಗಿ ನೋಡತಕ್ಕಂತಹ ಅವಶ್ಯಕತೆ ಇಲ್ಲ, ಅವರು ಹೋಗಬಾರದಾಗಿತ್ತು. ಹೋಗಬೇಕಾಗಿದ್ದರೆ; ಇವತ್ತೂ ಕೂಡ ಅಂಟುಲೆ ಕೇಸ್‌ನಲ್ಲಾಗಲಿ, ಬೇರೆ ಕೇಸ್‌ನಲ್ಲಾಗಲಿ ಮೂರು ನಾಲ್ಕು ಸಾರಿ ರಿವ್ಯೂ ಅಪ್ಲಿಕೇಷನ್ ಹಾಕಿದೆ, ನಿಮಗೆ ಒಂದು ರಿವ್ಯೂ ಅಪ್ಲಿಕೇಷನ್ ವಜಾ ಆಗಿರಬಹುದು. ಆದರೆ ಇನ್ನೂ ಹತ್ತಾರು ಅಪ್ಲಿಕೇಷನ್ ಹಾಕತಕ್ಕಂತಹ ಸಂದರ್ಭ ಇತ್ತು. ಆದುದರಿಂದ ಇದರಲ್ಲಿ ಹೋಗಿ ಅದರಲ್ಲಿ ಅನಧಿಕೃತವಾಗಿ ಪ್ರವೇಶ ಮಾಡಿದ್ದರಿಂದ ಇದು ನಿಜವಾಗಿಯೂ ಕೂಡ ನಮ್ಮ ಕರ್ನಾಟಕದಲ್ಲಿರತಕ್ಕಂತಹ ಪ್ರತಿಯೊಬ್ಬ ಪ್ರಜೆಗೆ ಅವಮಾನ ಮಾಡತಕ್ಕಂತಹ ವಿಷಯವಾಗಿದೆ. ಘನತೆ ಗಾಂಭೀರ್ಯತೆಯ ಪ್ರಶ್ನೆಯಾಗಿದೆ. ನ್ಯಾಯಾಲಯದ ಕಂಟೆಂಪ್ಟ್ ಆಫ್‌ದ ಕೋರ್ಟ್ ಆಗಿ ಇದನ್ನು ಮುಖ್ಯಮಂತ್ರಿಗಳೇ ಮಾಡಿದ್ದಾರೆ ಎನ್ನತಕ್ಕಂತಹ ವಿಷಯವನ್ನು ಇವತ್ತಿನ ದಿವಸ ಹೇಳಬೇಕಾಗಿದೆ. ಮುಖ್ಯ ಮಂತ್ರಿಗಳೇ ಮಾಡುತ್ತಿರುವಾಗ ಅಧಿಕಾರಿಗಳು ಹೋಗುತ್ತಾ ಇರುವುದರಲ್ಲಿ ತಪ್ಪೇನು, ಎಷ್ಟೋ ಜನ ಹೋಗುತ್ತಾರೆ. ನಾಳೆ ಕೇಳುತ್ತಾರೆ ಮುಖ್ಯಮಂತ್ರಿಗಳೇ ಹೋಗಿದ್ದಾರೆ ನಾವು ಹೋದರೆ ಏನು ತಪ್ಪು ಎಂದು ಕೇಳುವಂತಹ ಪರಿಸ್ಥಿತಿ ಒದಗಿ ಬಂದಿದೆ.

ಆದ್ದರಿಂದ ಉಪಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ನಿಜವಾಗಿ ಬೇಜವಾಬ್ದಾರಿ ಕೆಲಸವನ್ನು ಮಾಡತಕ್ಕಂತಹವರು ಯಾರು ಎನ್ನುವುದನ್ನು ನೋಡಬೇಕಾಗಿದೆ. ಮಾನ್ಯ ಉಪಾಧ್ಯಕ್ಷರೇ ಇವತ್ತು ನೋಡಬೇಕು. ಕಲ್ಯಾಣ್‌ಸಿಂಗ್‌ರವರು ಏನು ಮಾಡಿದರು? ಅವರು ಅಧಿಕಾರಿಗಳನ್ನು ಜೈಲಿಗೆ ಕಳುಹಿಸಲಿಲ್ಲ. ಅಧಿಕಾರಿಗಳಿಗೆ ಕಂಟೆಂಪ್ಟ್ ಆಫ್ ದ ಕೋರ್ಟ್ ನೋಟಿಸ್ ಕೊಟ್ಟಾಗ ಅವರು ಹೇಳಿದರು, ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಯಾರು ಮಾಡಬೇಕು ಎನ್ನತಕ್ಕಂಥದ್ದು, ನನ್ನ ರಾಜ್ಯದಲ್ಲಿ ಅಧಿಕಾರಿಗಳು ಏನಾದಾರೂ ತಪ್ಪು ಮಾಡಿದ್ದರೆ ಅದರ ಹೊಣೆ ನನ್ನದು ಎಂದು ಹೇಳಿ ಕಲ್ಯಾಣ್ ಸಿಂಗ್‌ರವರು ಜೈಲಿಗೆ ಹೋದರು. ಅವರಂತಹ ಕೆಲಸವನ್ನು ಇವತ್ತು ನಮ್ಮ ಮುಖ್ಯಮಂತ್ರಿಗಳು ಮಾಡಬೇಕಾಗಿತ್ತು. ರಿವ್ಯೂ ಪಿಟಿಷನ್ ಹಾಕತಕ್ಕಂತಹ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ಅರ್ಜಿ ಹಾಕಬೇಕಾಗಿತ್ತು. ವಾಸುದೇವನ್‌ರವರು ಅಲ್ಲ ತಪ್ಪು ಮಾಡಿರುವಂಥದ್ದು, ನಾನು ಹೇಳಿದ್ದು ಎಂದು ಹೇಳಿ ಅರ್ಜಿ ಹಾಕಬೇಕಾಗಿತ್ತು. ಅದು ಬಿಟ್ಟು ದೇಶವನ್ನು ನೀವು ಹರಾಜು ಹಾಕಿದ್ದೀರಿ.

(ಗೊಂದಲ)

ಕರ್ನಾಟಕವನ್ನು ಹರಾಜು ಹಾಕಿದ್ದೀರಿ. ಕರ್ನಾಟಕದ ಮಾನ ಮರ್ಯಾದೆ ಪ್ರಶ್ನೆ. ಇವತ್ತಿನ ದಿವಸ ಇಡೀ ಕರ್ನಾಟಕದ ಜನತೆ ತಲೆ ತಗ್ಗಿಸುತಕ್ಕಂತಹ ಕೆಲಸ ಮಾಡಿಕೊಂಡಿದ್ದೀರಿ. ಶಾಸನ ಸಭೆಯಲ್ಲಿ ನಾವು ಇದ್ದು, ಈ ಸರ್ಕಾರ ಬಂದ ನಂತರ ಅಧಿಕಾರಿಗಳು ಪ್ರತಿಯೊಬ್ಬ ಅಧಿಕಾರಿಗಳು ಯಾವ ಅಧಿಕಾರಿ ಇವತ್ತಿನ ದಿವಸ ಧೈರ್ಯವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಯಾವ ಮಂತ್ರಿಯ ಮಾತಿನಂತೆ ಇವತ್ತಿನ ದಿವಸ ಅಧಿಕಾರಿಗಳು ಕೆಲಸ ಮಾಡುತ್ತಾರೆ, ನೀವು ಹಾಕತಕ್ಕಂತಹ ಜವಾಬ್ದಾರಿಯನ್ನು ಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಯಾರಾದರೂ ಸೆಕ್ರೆಟರಿ ಆಗಿರಲಿ. ಈ ಪರಿಸ್ಥಿತಿಯಲ್ಲಿ ಆಗಿರತಕ್ಕಂಥ ಘಟನೆ ಬಗ್ಗೆ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಆ ಕೆಲಸವನ್ನು ತಾವು ಜವಾಬ್ದಾರಿ ವಹಿಸಿ ರಾಜೀನಾಮೆ ಕೊಟ್ಟು ಹೋಗತಕ್ಕಂತಹ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ತಾವು ಉತ್ತರ ಕೊಡಬೇಕು. ಮುಖ್ಯಮಂತ್ರಿಗಳು ಇವತ್ತಿನ ದಿವಸ ಬೆಂಗಳೂರಿನಿಂದ ದೆಹಲಿಗೆ ಹೋಗತಕ್ಕಂಥದ್ದು ಅಲ್ಲ, ಜೈಲಿನಲ್ಲಿ ಕಳುಹಿಸಿರತಕ್ಕಂತಹ ಸಂದರ್ಭದಲ್ಲಿ ಇಲ್ಲಿ ಬಂದು ಜವಾಬ್ದಾರಿಯುತ ಹೇಳಿಕೆಯನ್ನು ಕೊಡಬೇಕಾಗಿತ್ತು. ಅದರ ಪ್ರಯತ್ನ ಏನಾಯಿತು ಎನ್ನುವುದನ್ನು ಹೇಳಬೇಕಾಗಿತ್ತು. ಅದನ್ನು ಹೇಳಬೇಕಾದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ ಈ ವಿಷಯ ಇದು ಏನೋ, ಇಷ್ಟು ಹೊತ್ತಿಗೆ ಇಷ್ಟು ಗಂಟೆಗೆ ಅವರನ್ನು ಅರೆಸ್ಟ್ ಮಾಡಿದ್ದಾರೆ ಎಂದು. ನನಗೆ ಇದು ಅಧಿಕೃತವಾಗಿ ಗೊತ್ತಿಲ್ಲ. ತಾವೇ ನೋಡುತ್ತಿದ್ದೀರಿ, ನಾನು ಬೆಳಗಿನಿಂದ ಇಲ್ಲೇ ಕುಳಿತಿದ್ದೇನೆ. ಗೃಹ ಮಂತ್ರಿಗಳು ಆ ವಿಷಯ ತಿಳಿದುಕೊಳ್ಳುವುದಕ್ಕೋಸ್ಕರ ಪಕ್ಕಾ ಅಧಿಕೃತವಾಗಿ ಏನಾದರೂ ಹೇಳುವುದಕ್ಕೆ ವಿಷಯ ತಿಳಿದುಕೊಳ್ಳುವುದಕ್ಕೋಸ್ಕರ ನಾನು ಹೋಗಿ ತಿಳಿದುಕೊಂಡು ಬಂದ ಮೇಲೆ ಸದನಕ್ಕೆ ಹೇಳೋಣ ಎನ್ನುವುದು ಒಂದು. ಇನ್ನೊಂದು ವೀರಾವೇಶದ ಮಾತು ಮಾನ್ಯ ಸದಸ್ಯರಿಯವರು ನಾವು ರಾಜೀನಾಮೆ ಕೊಡಬೇಕು ಎನ್ನುವುದು ನಾವು ರಾಜೀನಾಮೆ ಕೊಟ್ಟ ತಕ್ಷಣ ಸುಪ್ರೀಂ ಕೋರ್ಟ್ ಕೆಳಗೆ ಬೀಳುವುದಿಲ್ಲ. ಸ್ವಲ್ಪ ನೀವು ಕೂಲ್ ಆಗಬೇಕು. ಕಲ್ಯಾಣ್ ಸಿಂಗ್‌ರವರು ಸರ್ವೋಚ್ಚ ನ್ಯಾಯಾಲಯಕ್ಕೆ ಗೌರವ ಕೊಟ್ಟರು ಎನ್ನುವ ಮಾತು ಶ್ಲಾಘನೀಯವೆ. ಮುಖ್ಯಮಂತ್ರಿ ಆಗಿದ್ದವರು ಸರ್ವೋಚ್ಚ ನ್ಯಾಯಾಲಯದ ಗೌರವವನ್ನು ಉಳಿಸುವುದಕ್ಕೆ ಅವರು ಜೈಲಿಗೆ ಹೋದರು, ಕಂಟೆಪ್ಟ್ ಕೇಸ್ ಆಗಿದ್ದುದು ಅಧಿಕಾರಿ ಮೇಲೆ ಅಲ್ಲ, ಕಂಟೆಂಪ್ಟ್ ಕೇಸ್ ಆಗಿದ್ದು ಚೀಫ್ ಮಿನಿಸ್ಟರ್ ಮೇಲೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಒಬ್ಬ ಉಪ ಮುಖ್ಯಮಂತ್ರಿಗಳಾಗಿ 10.45ಕ್ಕೆ ಆದಂತಹ ಘಟನೆ ಎರಡು ಗಂಟೆ ಆದರೂ ನಮಗೆ ಸುದ್ದಿ ಇಲ್ಲ, ನಮಗೆ ಗೊತ್ತಿಲ್ಲ ಎಂದರೆ ಇದು ಬೇಜವಾಬ್ದಾರಿ ಸರ್ಕಾರ. ನಿಮ್ಮ ಗೃಹ ಮಂತ್ರಿಗಳನ್ನು ಕರೆಯಿಸಿ. ಇದಕ್ಕಿಂತ ಬೇಜಾವಾಬ್ದಾರಿಯುತವಾದ ಘಟನೆ ಬೇರೆ ಯಾವುದೂ ಇಲ್ಲ. ದಯಮಾಡಿ ಅಧ್ಯಕ್ಷರೆ, ಗೃಹ ಸಚಿವರಿಗೆ ಕರೆಯಬೇಕು, ಸ್ಟೇಟ್‌ಮೆಂಟ್ ಮಾಡಬೇಕು. ವಾಸ್ತವ ಸಂಗತಿ ನಮಗೆ ತಿಳಿಸಬೇಕು. ಅಲ್ಲಿಯವರೆಗೆ ಸದನದ ಕಾರ್ಯಕಲಾಪ ನಡೆಸುವುದು ಅಕ್ಷಮ್ಯ ಅಪರಾಧವಾಗುತ್ತದೆ. ನಾವು ಒಂದು ಕ್ಷಣವೂ ಸಹಿತ ಇಲ್ಲಿ ಕುಳಿತು ಕೊಳ್ಳುವುದಕ್ಕೆ ಸಿದ್ಧವಿಲ್ಲ.

2.00 ಪಿ.ಎಂ.

(ಗೊಂದಲ)

ಉಪಾಧ್ಯಕ್ಷರು : ಸ್ವಲ್ಪ ಹೊತ್ತು ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಮಾಡಿದರೆ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ನೀವು ಮಾತನಾಡಿದ್ದನ್ನು ಅವರು ಕೇಳಿದ್ದಾರೆ. ಅವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಈಗ ತಾವು ನಮ್ಮ ರಕ್ಷಣೆಗೆ ಬರಬೇಕು.

ಉಪಾಧ್ಯಕ್ಷರು : ಈಗ ಅವರು ಏನಾದರೂ ಹೇಳಲಿ.

Sri Y. Ramakrishna : We want answer from the Minister.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು ಹೇಳಿಕೆ ಕೊಡಿಸಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ವಿಷಯವನ್ನು ಕೇಳಿದ್ದೀರಿ, ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತೇನೆ. ಇದು ಸರ್ವೋಚ್ಚ ನ್ಯಾಯಾಲಯ, ಅದರ ಆಜ್ಞೆಯ ಬಗ್ಗೆ ಇರತಕ್ಕಂಥಾದ್ದರಿಂದ ಆವೇಶದ ಮಾತು ಬೇಡ. ವಾಸ್ತವಾಂಶವನ್ನು ಸದನಕ್ಕೆ ತಿಳಿಸುತ್ತೇನೆ. ಸದನಕ್ಕೆ ತಿಳಿಸದೆ ಇರುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅಲ್ಲಿಯವರೆಗೆ ಈ ಸದನದಲ್ಲಿ ಹೀಗೆಯೇ ನಿಂತಿರುತ್ತೇವೆ ಸ್ವಾಮಿ. ನಾವು ಹೊರಗಡೆ ಎಲ್ಲಿಗೂ ಬರುವುದಿಲ್ಲ. ವಾಕ್‌ಔಟ್ ಮಾಡುವುದಿಲ್ಲ. ತಾವು ಉತ್ತರ ಕೊಡುವವರೆಗೆ ನಾವಂತೂ ಒಂದು ಕ್ಷಣ ಬೇರೆ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಈ ರೀತಿ ಹಠ ಹಿಡಿದರೆ.....

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮಗೆ ಉತ್ತರ ಕೊಡಬೇಕು.

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಸಭಾಧ್ಯಕ್ಷರೆ, ತಾವು ಹೇಳಿ, ಈ ರೀತಿ ಎದ್ದು ನಿಂತರೆ ಉತ್ತರ ಯಾವ ರೀತಿ ಕೊಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಸುಮಾರು ಹತ್ತೂವರೆ ಅಥವಾ ಹತ್ತೂ ಮುಕ್ಕಾಲು ಗಂಟೆಗೆ ವಾಸುದೇವನ್ ಅವರನ್ನು ಬಂಧನ ಮಾಡಿ ಜೈಲಿಗೆ ಕರೆದುಕೊಂಡು ಹೋಗಿದ್ದಾರೆ. ಅದರ ಬಗ್ಗೆ ಒಂದು ಏನಾದರೂ ಸ್ಟೇಟ್‌ಮೆಂಟ್ ಮಾಡಬೇಕು ಎಂದು ಕೇಳಿದರು. ಅದಕ್ಕೆ ನಾನು ಮನ್ಯ ಗೃಹ ಮಂತ್ರಿಗಳು ಬರುತ್ತಾರೆ, ಏಕೆಂದರೆ ವಿಷಯವನ್ನು ಪಕ್ಕಾ ತಿಳಿದುಕೊಳ್ಳದೆ ಏನು ಹೇಳುವುದು. ಈಗ ಗೃಹಮಂತ್ರಿಗಳು ಬಂದಿದ್ದಾರೆ. Ar you ready?

(ಈ ಹಂತದಲ್ಲಿ ಗೃಹಮಂತ್ರಿಗಳಾದ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಆಗಮಿಸಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ : Yes Sir, I am ready. ನಾನು ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಯಾರಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ತಾವು ಇಷ್ಟು ಅವಸರ ಮಾಡಿದರೆ ಹೇಗೆ?

ಶ್ರೀ ಪಿ.ಜಿ.ಆರ್ ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ಸದನದ ಮುಂದೆ ಇಡುವುದಕ್ಕೆ ಬಯಸುತ್ತೇನೆ.

"ಇಂದು ಎಂದರೆ ದಿ: 13.9.95ರಂದು ಬೆಳಿಗ್ಗೆ 10.10ಕ್ಕೆ ಶ್ರೀ ವಾಸುದೇವನ್ ಅವರು ಬೆಂಗಳೂರು ನಗರದ ಪೊಲೀಸ್ ಕಮಿಷನರ್ ಶ್ರೀ ಶ್ರೀನಿವಾಸಲು ಅವರ ಮುಂದೆ ಹಾಜರಾಗಿರುತ್ತಾರೆ. ಪೊಲೀಸ್ ಕಮೀಷನರ್ ಶ್ರೀ ಶ್ರೀನಿವಾಸಲು ಅವರು ಸುಪ್ರೀಂ ಕೋರ್ಟ್, ಸಿವಿಲ್ ಅಪೀಲ್ ನಂ. 797, 1993 ಆರ್ಡರ್ ಪ್ರಕಾರವಾಗಿ ಶ್ರೀ ವಾಸುದೇವನ್ ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಬೆಳಿಗ್ಗೆ 10.30ಕ್ಕೆ ಕಳುಹಿಸಿದ್ದಾರೆ. ಶ್ರೀ ವಾಸುದೇವನ್ ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಇಡಲಾಗಿದೆ"

(ಈ ಹಂತದಲ್ಲಿ ಮಾನ್ಯ ಸದಸ್ಯರೊಬ್ಬರು ಶೇಮ್, ಶೇಮ್ ಎಂದು ಹೇಳಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಒಂದು ವಿಶೇಷವಾದಂತಹ, ವಿಚಿತ್ರವಾದಂತಹ ಸಂದರ್ಭದಲ್ಲಿ ನಾವು ಇಲ್ಲಿ ಇದ್ದೇವೆ. ಯಾವ ಒಂದು ಅಕ್ಷಮ್ಯ ಅಪರಾಧವನ್ನು ಈ ಸರ್ಕಾರ ಮಾಡಿ, ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂತಹ ಘಟನೆ ಏನು ನಡೆದಿದೆ, ಇದು ಇಡೀ ರಾಜ್ಯದ ಜನತೆ ತಲೆತಗ್ಗಿಸುವಂತಹ ಘಟನೆ. ಇಂತಹ ಉಸಿರು ಕಟ್ಟುವಂತಹ ವಾತಾವರಣದಲ್ಲಿ ಯಾವುದೇ ಪ್ರಾಮಾಣಿಕ ಅಧಿಕಾರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಇದು ಉದ್ದೇಶಪೂರ್ವಕವಾಗಿ ಮುಖ್ಯಮಂತ್ರಿಗಳು ತಮಗೆ ಬೇಕಾದಂತಹ ವ್ಯಕ್ತಿಗೆ ಪ್ರಮೋಷನ್ ಕೊಡಿಸುವಂತಹ ಕಾರಣಕ್ಕೋಸ್ಕರ ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂತಹ ಒಂದು ಸಂದರ್ಭ ಬಂದಿದೆ. ಅದಕ್ಕಾಗಿ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಒತ್ತಾಯ ಮಾಡುತ್ತಾ, ಈ ಸರ್ಕಾರ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಹಕ್ಕಿಲ್ಲ ಎಂದು ಹೇಳಿ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಯಡಿಯೂರಪ್ಪನವರು ಮಾಡಿರತಕ್ಕಂಥ ಆರೋಪ ಏನಿದೆ ಅದರಲ್ಲಿ ಸತ್ಯ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಸಂಬಂಧಿಕರನ್ನು ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಿರತಕ್ಕಂಥ ಕ್ರಮ ಅಲ್ಲ. ಹಿಂದೆ ಮೂರು ನಾಲ್ಕು ವರ್ಷಗಳಿಂದ ಹೈಕೋರ್ಟ್‌ನಲ್ಲಿ, ಸುಪ್ರೀಂಕೋರ್ಟ್‌ನಲ್ಲಿ.... Mr. Speaker Sir, Government should clarify. You have to give this opportunity.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಳೆದ ಎರಡು ಮೂರು ವರ್ಷಗಳಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಆಗಿರತಕ್ಕಂಥ ತೀರ್ಪಿನ ಪ್ರಕಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಆಗಿರತಕ್ಕಂಥ ಆದೇಶದ ಪ್ರಕಾರವಾಗಿ ಇವತ್ತಿನ ದಿವಸ ಸರ್ಕಾರ ಸುಪ್ರೀಂ ಕೋರ್ಟ್‌ನ ಆಜ್ಞೆಗೆ ತಲೆಬಾಗಿದೆ. ಸನ್ಯಾಸ್ಯ ದೇವೇಗೌಡರು ಯಾವುದೇ ಅವರ ಸಂಬಂಧಿಕರನ್ನು ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿಲ್ಲ. ಅವರಿಗೆ

ಯಾವುದೇ ರೀತಿಯ ಸಂಬಂಧ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇದರಲ್ಲಿ ರಾಜಕೀಯ ಲಾಭವನ್ನು ಪಡೆಯಲಿಕ್ಕೆ ಎಂದು ಹೇಳಿ ಸ್ವಾರ್ಥದ ದೃಷ್ಟಿಯಿಂದಾಗಿ ಇದರಲ್ಲಿ ಬೆಂದ ಮನೆಯಲ್ಲಿ ಏನಾದರೂ ಸಿಕ್ಕಿದರೆ ಹಿಡಿಯಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಈ ಹೇಳಿಕೆಯನ್ನು ಇವರು ಮಾಡುತ್ತಾರೆಯೇ ಹೊರತು ಇದು ಸತ್ಯಕ್ಕೆ ದೂರವಾಗಿರತಕ್ಕಂಥಾದ್ದು. ನಮಗೂ ಸಹ ನೋವಿದೆ. ಆದರೆ ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಪಿಗೆ ನಾವು ತಲೆ ಬಾಗಲೇ ಬೇಕಾಗಿದೆ ಸ್ವಾಮಿ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಒಬ್ಬ ಹಿರಿಯ ಐಎಎಸ್ ಅಧಿಕಾರಿಯನ್ನು ನ್ಯಾಯಾಲಯದ ನಿರ್ಣಯವನ್ನು ಜಾರಿಗೆ ತರಲಿಲ್ಲ ಎನ್ನುವ ಒಂದು ಹಿನ್ನೆಲೆಯಲ್ಲಿ ಇವತ್ತು ಅವರು ಕಾರಾಗೃಹ ಶಿಕ್ಷೆಗೆ ಒಳಗಾಗಿದ್ದಾರೆ ಎಂದು ಹೇಳಿ ನಮಗೆಲ್ಲರಿಗೂ ದಿಗ್ಭ್ರಮೆಯಾಯಿತು. ಅವರು ಒಳ್ಳೆಯ ಅಧಿಕಾರಿ ಇರಬಹುದು. ಅವರಿಗೆ ತೊಂದರೆಯಾಗಿರಬಹುದು. ಆದರೆ ಈ ಸದನದಲ್ಲಿ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದ ಮೇಲೆ ವಂದನೆ ಸಲ್ಲಿಸುತ್ತಾ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು. This Government will never allow such a thing to happen. I will take the responsibility. ಎಂದು ಹೇಳಿ. ಹಾಸನದಲ್ಲಿ ಒಬ್ಬ ಅಧಿಕಾರಿ ನ್ಯಾಯಾಲಯದ ಆದೇಶವನ್ನು ಜಾರಿಗೆ ಕೊಡಲಿಲ್ಲ ಎಂದು ಹೇಳಿ.

If he is not going to act in accordance with law, his suspension order will go ಎಂದು ಹೇಳಿ ಈ ಮನೆಯಲ್ಲಿ.....

ಅಧ್ಯಕ್ಷರು : ಏನು ಇದು, What are you upto? What is the effect of that?

Sri P.G.R. SINDYA : He is going for a debate.

MR. SPEAKER : Iam Sorry. I am not allowing him to raise this.

(INTERRUPTION)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಯಾರು ಜವಾಬ್ದಾರರು ಎಂದು ನಾವು ಹೇಳಬಾರದೇ? Who is responsible for this?

Mr. Speaker : They wanted the Statement of the Minister and the Minister has made the Statement. I am not allowing discussion on this matter. I thought ಅವರು ಏನೋ ಹೇಳುತ್ತಾರೆಂದರೆ, he is going back to old references.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧಿಕಾರಿಗಳ ಬಗ್ಗೆ ಅನುಕಂಪ ಇಲ್ಲ ಎಂದು ಅಲ್ಲ. ಅಧಿಕಾರಿಗಳ ಬಗ್ಗೆ.... ಇಡೀ ಸದನದಲ್ಲಿ ಆಗ ಮಾತನಾಡಿದರು. ಆದರೆ ಯಾವ ಕಾರಣಕ್ಕೆ ಅವರು ಹೋದರು ಜೈಲಿಗೆ... Who is responsible for that?

ಅಧ್ಯಕ್ಷರು : ಅದಕ್ಕೆ ಸೆಪರೇಟಾಗಿ ನೋಟೀಸ್ ಕೊಡಿ, ಮಾಡೋಣ.

We will discuss it. You cannot take this House like this.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಇದೆಲ್ಲಾ ಆಗಿಹೋಗಿದೆಯಲ್ಲ. ಇದಕ್ಕೆ ಯಾರು ಜವಾಬ್ದಾರರು ಎಂದು ನಾವು ಮಾತನಾಡದೇ ಹೋದರೆ ನಾಳೆ ಇದೇ ರೀತಿಯಾಗಿ ಎಲ್ಲಾ ಅಧಿಕಾರಿಗಳು ಜೈಲಿಗೆ ಹೋಗುತ್ತಾರೆ. ಒಂಭತ್ತು ತಿಂಗಳಾಯಿತು, ಇಂಪ್ಲಿಮೆಂಟ್ ಮಾಡಲಿಲ್ಲ...

(INTERRUPTION)

ಅಧ್ಯಕ್ಷರು : ದಯಮಾಡಿ ಕೇಳಿ. If you want to raise this matter for discussion ಸೂಕ್ತ ರೂಲ್ಸ್ ಅನ್ನು ಸಸ್ಪೆಂಡ್ ಮಾಡಿ. You cannot raise it now. Demands hardly any time?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಯಾವಾಗ ಅಲೋ ಮಾಡಿದಿರಿ ಅವರಿಗೆ ರಿಪ್ಲೈ ಮಾಡುವುದಕ್ಕೆ, ರೈಸ್ ಮಾಡುವುದಕ್ಕೆ ಎಂದರೆ....

ಅಧ್ಯಕ್ಷರು : ರಿಪ್ಲೈ ಕೊಡುವುದಕ್ಕೆ ಅಲ್ಲ. ನಾನು ಬರುವ ಹೊತ್ತಿಗೆ ಅವರು ರೈಸ್ ಮಾಡಿದ್ದರು. ಹೋಮ್ ಮಿನಿಸ್ಟರ್ ಸ್ಟೇಟ್‌ಮೆಂಟ್ ಕೊಟ್ಟ ಮೇಲೆ ಅವರು ವಾಕ್‌ಔಟ್ ಮಾಡಿ ಹೋಗಿದ್ದಾರೆ.

Sri M. MALLIKARJUNA KHARGE·: We don't want to go in default without explaining the things as to under what circumstances they have gone.

ಯಾರು ಅದಕ್ಕೆ ಕಾರಣಕರ್ತರು ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಇನ್ನೊಂದು ತಾವು ಲಕ್ಷ್ಮದಲ್ಲಿ ಇಟ್ಟುಕೊಳ್ಳಬೇಕು ಮಾನ್ಯ ಅಧ್ಯಕ್ಷರೆ.....

Sri J.H. Patel : Has he got authority to review the Supreme Court judgement?

Sri M. MALLIKARJUNA KHARGE : We are discussing, we are not reviewing. ಈಗ ಏನು ಪರಿಣಾಮವಾಗುತ್ತದೆ? ಅದರ ಮೇಲೆ. ಪರಿಣಾಮವಾಗಲಿ, ಏನಾಗುತ್ತದೆ? ಜಡ್ಜ್‌ಮೆಂಟ್ ಮುಗಿದುಹೋಯಿತು. ನಾವು ಹೇಳುವುದೇನೆಂದರೆ ಜಿ.ಓ. ಡಿ-ಫಾಲ್ಟ್‌ನಿಂದ ನೀವು ಇಂಪ್ಲಿಮೆಂಟ್ ಮಾಡಲಿಲ್ಲ. ನೀವು ಬೇಕಾದವರನ್ನು ಪ್ರಮೋಷನ್ ಕೊಡುವುದಕ್ಕೋಸ್ಕರ ವಿತ್ ಹೆಲ್ಡ್ ಮಾಡಿ, ನಿಮ್ಮ ಪಾರ್ಟಿ ಸದಸ್ಯರೆ ಅದನ್ನು ನಿಮ್ಮ ಗಮನಕ್ಕೆ ತಂದರು ಒಂದು ತಿಂಗಳಿನಿಂದ, ನೀವು ಇಂಪ್ಲಿಮೆಂಟ್ ಮಾಡಲಿಲ್ಲ.

ಶ್ರೀ ಜೆ.ಹೆಚ್. ಪಟೀಲ್ : ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪುನಃ ಮೂರು ಸದಸ್ಯರು ನಿಮ್ಮ ಗಮನಕ್ಕೆ ಬಂದರು. ಅದನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ಅಂದರೆ ಇದರ ಅರ್ಥ ಏನು? So you are interested.

ಅಧ್ಯಕ್ಷರು : ನಾನು ಈ ವಿಚಾರವನ್ನು ನೀವು ಚರ್ಚೆ ಮಾಡುವುದು ಬೇಡ ಎಂದು ಹೇಳುತ್ತಿಲ್ಲ. ಅದನ್ನು ಈಗ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ದಯಮಾಡಿ ನಿಯಮಾವಳಿಗಳನ್ನು ನೋಡಿಕೊಂಡು ಯಾವ ನಿಯಮಾವಳಿ ಕೆಳಗೆ ತರುವುದಕ್ಕೆ ಆಗುತ್ತದೆ ಎಂದು ನೋಡಿಕೊಂಡು ತಾವು ನೋಟೀಸ್ ಕೊಡಿ, ಚರ್ಚೆಗೆ ಅವಕಾಶ ಕೊಡುತ್ತೇನೆ. ಅಬ್ರಪ್ಟ್ ಆಗಿ ಅವರು ಎತ್ತಿದ್ದರು. ಹೋಮ್ ಮಿನಿಸ್ಟರ್ ಸ್ಟೇಟ್‌ಮೆಂಟ್ ಮಾಡುವುದು ಸರ್ಕಾರದ ಜವಾಬ್ದಾರಿ ಇತ್ತು, ಅದಕ್ಕೆ ಅಲ್ಲಿ ಕ್ಲೋಸ್ ಮಾಡಿದ್ದೇವೆ. Demands we will have to close it and the Government will have to reply.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಅವರು ರಿಪ್ಲೈ ಕೊಟ್ಟ ಮೇಲೆ ನಾವು ಮಾತನಾಡಬೇಕಾಗುತ್ತದೆ. ಅವರು ಮಾತನಾಡದೇ ಹೋದರೆ ನಾವು ಹೇಳುತ್ತಿರಲಿಲ್ಲ ಯಾವಾಗ ಅವರು ಮಾಡಿದ್ದಾರೆ ಎಂದರೆ, ನಮಗೆ ಎಕ್ಸ್‌ಪ್ಲೈನ್ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಏಕೆಂದರೆ ಇವರು ಕಾರಣಕರ್ತರಿದ್ದು ಒಬ್ಬ ಇನ್ನೊಸೆಂಟ್ ಮನುಷ್ಯನಿಗೆ ಜೈಲಿಗೆ ಕಳುಹಿಸತಕ್ಕಂಥಾದ್ದು ಮಾಡಿದರೆ ನೀವು ಇನ್ನೊಬ್ಬರ ಮೇಲೆ 3 ವರ್ಷ, 10 ವರ್ಷ ಎಂದರೆ,

ಅಧ್ಯಕ್ಷರು : ನಿಮ್ಮ ರೆಪ್ಯುಟೇಷನ್ it is different in this House. He has not given the reply. He has made the statement. Mr. Kharge, please make use the rules. I am not against the matter being raised here.

Please permit the hon. Member to proceed with his speech.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ರಿಕ್ವೆಸ್ಟ್ ನನ್ನದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ವಿಚಾರದಲ್ಲಿ ಚರ್ಚೆ ಮಾಡುವಂತಹದ್ದರಲ್ಲಿ we have an open mind. We are not agaist. ಯಾವ ಫಾರ್ಮ್‌ನಲ್ಲಿ ತರಬೇಕು ಎನ್ನುವುದು ತಮಗೆ ಬಿಟ್ಟಿದ್ದುದು, ತಾವು ಏನು ತೀರ್ಪು ಕೊಡುತ್ತೀರೋ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

Mr. SPEAKER : I do not wish to scuttle the discussion on this.

Sri. M. MALLIKARJUNA KHARGE : Sir, you have got ample powers. You have got residuary powers to suspend the rules. This is most important matter. A senior IAS officer who has gone to Jail for the first time in the history of Karnataka and probably in the history of our country.

ಇದು ಮೊದಲ ಸಲ ಒಬ್ಬ ಐಎಎಸ್ ಆಫೀಸರ್ ಅನ್ನು ಜೈಲಿಗೆ ಕಳುಹಿಸುವಂಥಾದ್ದು ನಿಮ್ಮ ಕೈಯಿಂದ ಆಗಬೇಕಾದರೆ, ನೀವು ಲೆಕ್ಕ ಹಾಕಿ, ಯಾವ ರೀತಿಯಾಗಿ ಸರ್ಕಾರ ನಡೆಸುತ್ತಿದ್ದೀರೆಂದು, ಅದಕ್ಕೆ ಮಾನ್ಯ ಅಧ್ಯಕ್ಷರೆ, ನೀವು ರೂಲ್ಸ್ ಸಸ್ಪೆಂಡ್ ಮಾಡಿ, ಅದು ಪವರ್ ಇದೆ, ನಿಯಮ 363ರಲ್ಲಿ ಬೇಕಾದರೆ ರೂಲ್ಸ್‌ನಲ್ಲಿ ಸಸ್ಪೆಂಡ್ ಮಾಡಿಕೊಂಡು ಇದನ್ನು ಡಿಸ್‌ಕಷನ್‌ಗೆ ತೆಗೆದುಕೊಳ್ಳಿ.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಚರ್ಚೆಯಾಗಬೇಕು. ಈಗಾಗಲೇ ಸಾಕಷ್ಟು ನಿಧಾನವಾಗಿದೆ. ಇವತ್ತು ಸಂಜೆ ಒಳಗೆ ಉತ್ತರವನ್ನು ಕೊಡಬೇಕಾಗುತ್ತದೆ. ನಿಮ್ಮ ಮನವಿಯನ್ನು ನಾನು ಕೇಳಿದ್ದೇನೆ.

Sri M. MALLIKARJUNA KHARGE : Sir, this is not important. The entire bureaucracy will be demoralised. ಜನರಿಗೂ ಕೂಡ ವಿಶ್ವಾಸ ಹೋಗಿದೆ, ಸರ್ಕಾರ ಇದೆಯೋ, ಸತ್ತಿದೆಯೊ, ಉಳಿದಿದೆಯೊ ಎಂದು, ಏಕೆಂದರೆ ಸೆಕ್ರೆಟರಿಗಳಿಗೆ ರಕ್ಷಣೆ ಮಾಡುವಂಥಾದ್ದಕ್ಕೆ ಸಾಧ್ಯವಿಲ್ಲ, ಸೆಕ್ರೆಟರಿಗೆ ಪ್ರೊಟೆಕ್ಷನ್ ಕೊಡುವಂಥಾದ್ದು ಸಾಧ್ಯವಿಲ್ಲವೆಂದರೆ, ಎಷ್ಟರಮಟ್ಟಿಗೆ ಇವರು ಜನರಿಗೆ ಕೊಡುತ್ತಾರೆ. ಈಗ ನಾನು ಹೇಳಬೇಕಾಗುತ್ತದೆ. ನೀವು ಉಳಿಯಬೇಕೆಂದು ಹೇಳಿ ಇದೆಲ್ಲಾ ಮಾಡಿದ್ದು. ನೀವು ಮುಖ್ಯಮಂತ್ರಿಗಳು ಉಳಿಯಬೇಕೆಂದು ಹೇಳಿ, ಫೈಲ್ ಇಡಿ ಎಂದು. ಅವರಿಗೆ ಓರಲ್ ಇನ್‌ಸ್ಟ್ರಕ್ಶನ್ ಕೊಟ್ಟು ಫೈಲ್ ಇಡಿಸಿ ಇವತ್ತಿನ ದಿವಸ ಜೈಲಿಗೆ ಕಳುಹಿಸುವಂಥಾದ್ದು ಮಾಡಿದ್ದೀರಿ. ಇದಕ್ಕೆ ಮುಖ್ಯ ಕಾರಣ ಕರ್ತರು ನೀವು.

(ಗೊಂದಲ)

Sri J.H. PATEL : This kind of shouting will have to answer. You are responsible. ಈ ರೀತಿ ಕೂಗಾಡುವುದರಿಂದ ಉತ್ತರ ಸಿಗುವುದಿಲ್ಲ. ತಾವು ಕುಳಿತುಕೊಂಡರೆ ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜೆ.ಹೆಚ್. ಪಟೇಲ್‌ರವರೆ ತಾವು ಸೀನಿಯರ್ ಲೀಡರ್, ಇಂಥಾದ್ದು ನಡೆದಾಗ ಒಂದು ಕಂಟೆಂಪ್ಟ್ ಕೇಸ್ ಬಂದಾಗ ಏಕೆ ಮುಖ್ಯಮಂತ್ರಿಯವರಿಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಏಕೆ ತಾವು ಅಡ್ವೈಸ್ ಮಾಡಲಿಲ್ಲ. ಏಕೆ ಅವರು ಜೈಲಿಗೆ ಹೋಗುವಂಥಾದ್ದು ಆಗಬೇಕು. ನೀವು ಉತ್ತರವನ್ನು ಕೊಡುವುದಕ್ಕೆ ತಯಾರಿಲ್ಲ. ಡಿಸ್‌ಕಷನ್ ಮಾಡುವುದಕ್ಕೆ ತಯಾರಿಲ್ಲ, ಅಧ್ಯಕ್ಷರೆ, ರೂಲ್ಸ್ ಸಸ್ಪೆಂಡ್ ಮಾಡಬಹುದು, ತಾವು ಮಾಡಿ. ನಾವು ಡಿಸ್‌ಕಷನ್‌ಗೆ ತಯಾರಿದ್ದೇವೆ. ನಿಮ್ಮ ಕಡೆಯವರೆ ಅಪ್ಲಿಕೇಷನ್ ಕೊಟ್ಟಿದ್ದಾರೆ. ಒಬ್ಬ 18 ವರ್ಷಗಳು ಹೋರಾಟ ಮಾಡಿದ, ಅವನಿಗೆ ಎಷ್ಟು ನೋವು ಆಗಿರಬೇಕು. ಅವನು ಎಷ್ಟು ತೊಂದರೆಯಲ್ಲಿರಬೇಕು. ಅವನಿಗೆ ಎಷ್ಟು humiliation ಆಗಿರಬೇಕು. ಅದರ ಬಗ್ಗೆ ಚಿಂತನೆ ಇಲ್ಲ.

Mr. SPEAKER : We are not going into all those things. ದಯಮಾಡಿ ತಾವು ಸಹಕರಿಸಿ, ಸೀನಿಯರ್ ಮೆಂಬರ್ ಇದ್ದೀರಿ. ಚರ್ಚೆ ಪ್ರಾರಂಭ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಇದರ ಬಗ್ಗೆ ಚಿಂತನೆ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಇದು ಕಡತಕ್ಕೆ ಹೋಗುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ ಹೋಗಬಾರದು? ಏನು ಅನ್‌ಪಾರ್ಲಿಮೆಂಟರಿ ಇದೆ.

ಶ್ರೀ ಜೆ.ಹೆಚ್. ಪಟೇಲ್ : ಅನ್ ಪಾರ್ಲಿಮೆಂಟರಿ ಏನು ಎಂದು ಹೇಳಬಾರದ? ಇವತ್ತು ಮಾನ್ಯ ಗೃಹ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ನಮ್ಮ ರಾಜ್ಯದ ಸರ್ವಿಸ್‌ನಲ್ಲಿರುವಂತಹ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಸರ್ವೋಚ್ಚ ನ್ಯಾಯಾಲಯದ ಆಜ್ಞೆಯ ಪ್ರಕಾರ ಜೈಲಿಗೆ ಕರೆದುಕೊಂಡು ಹೋಗಿದ್ದಾರೆ. ಈಗ ನಾವು ಚರ್ಚೆ ಮಾಡಬೇಕಾದರೆ ಈ ಅಧಿಕಾರಿಗೆ ಈ ಸ್ಥಿತಿ ಬರುವುದಕ್ಕೆ ಕಾರಣ ಏನು? ನೀವು ರಾಜೀನಾಮೆ ಕೊಡಿ, ನಾವು ಅದನ್ನು ಚರ್ಚೆ ಮಾಡುತ್ತೇವೆಂದರೆ ನೀವು ಕೇಳಿ ಅನ್ ಪಾರ್ಲಿಮೆಂಟರಿ ಎಂದು ಏಕೆ ಹೇಳುತ್ತೇನೆಂದರೆ ಈ ಸದನದಲ್ಲಿ ನಾವೆಲ್ಲರೂ ರಾಜ್ಯಾಂಗ ಬದ್ಧವಾಗಿ ಓತ್ ತೆಗೆದುಕೊಂಡು ಬಂದಿದ್ದೇವೆ. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ್ನು ಇವತ್ತು ನಾವು ಏನಾದರೂ ಚರ್ಚೆ ಮಾಡುತ್ತೇವೆಯೇ ಸ್ವಲ್ಪ ವಿಚಾರ ಮಾಡಿ. We are not going into the merits of the Supreme Court Judgement.

ಅಥವಾ ಈ ಅಧಿಕಾರಿ ಅವರ ಸರ್ವೀಸ್‌ನಲ್ಲಿ ಏನು ಮಾಡಿದರು,ಅವರು ಎಷ್ಟು ಒಳ್ಳೆಯವರು, ಇದಕ್ಕೆ ಯಾರು ಕಾರಣರು ಈ ಸೆಕ್ರೆಟರಿಯೇಟ್‌ನಲ್ಲಿ ಹಿಂದಿನ ಸರ್ಕಾರಗಳು ಏನು ಕಾರಣ, ಅದನ್ನು ಚರ್ಚೆ ಮಾಡುತ್ತೇವಾ ಅದು ರೆಲಿವೆಂಟೇ? ಆದುದರಿಂದ ಈಗ ಬಿ.ಜೆ.ಪಿ.ಯವರು ಸಭಾತ್ಯಾಗ ಮಾಡಿದರು, ಅವರು ಏನು ಹೇಳಿದರು ಎಂದರೆ ಇದಕ್ಕ ಸರ್ಕಾರ ಕಾರಣ, ದೇವೇಗೌಡರು ಕಾರಣ ಎಂದು. with all honesty, I should submit to this House that no Chief Minister would have taken so much pains to save the honour of the Government and the honour of the officer. No Chief Minister would have taken so much of pains.

Sri M. MALLIKARJUN KHARGE : To save your skin. Not because of sympathy. Because of your mistake in implementing the direction of the Supreme Court and not to save that officer.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಇವತ್ತು ಅದಕ್ಕೋಸ್ಕರ ಈ ಸದನದ ಕಲಾಪಗಳನ್ನು ಬಿಟ್ಟು ದೆಹಲಿಯಲ್ಲಿ ಇದ್ದಾರೆ. ಯಾರೂ ಒಬ್ಬರು ಹೇಳಿದರು, ಸುಪ್ರೀಂ ಕೋರ್ಟ್ ಜಡ್ಜ್ ಏಕೆ ನೋಡಿದರು ಎಂದು. The Chief Minister who is representative of 5 crore people ಏಕೆಂದರೆ ನ್ಯಾಯ, ಅನ್ಯಾಯ ಆದರೆ ಅವರ ಹತ್ತಿರ ಚರ್ಚೆ ಮಾಡುವುದಕ್ಕೆ ಹೋಗುವುದೆ ಒಂದು ಅನ್ ಕಾನ್‌ಸ್ಟಿಟ್ಯೂಶನ್‌ಲ್ಲಿ ನಾವು ಏನಾದರೂ ಹೋಗಿ ಅರ್ಜಿಯನ್ನು ಹಿಡಿದುಕೊಂಡು ಹೀಗೆ ಮಾಡಿ ಹಾಗೆ ಮಾಡಿ, ಕಾನೂನು ಬಾಹಿರವಾಗಿ ಏನಾದರೂ ಮಾಡಿ ಎಂದರೆ ಅದು ತಪ್ಪು ಆಗಬಹುದು. ರಾಷ್ಟ್ರಪತಿಗಳನ್ನು ನೋಡಿದ್ದಾರೆ, ಗೃಹಮಂತ್ರಿಗಳನ್ನು ನೋಡಿದ್ದಾರೆ. ಇದು ಸಿಕ್ರೇಟ್ ಏನು ಅಲ್ಲ. ಕಾನೂನು ಇಲಾಖೆಯನ್ನು ಕೇಳಿದ್ದಾರೆ. ಸುಪ್ರೀಂ ಕೋರ್ಟಿನ ಜಡ್ಜ್‌ರವರನ್ನೂ ಕಂಡಿದ್ದಾರೆ ಏಕೆಂದರೆ ಎಲ್ಲೋ ಒಂದು ಕಡೆ ಅನ್ಯಾಯವಾಗಿದೆ, ತಪ್ಪು ಯಾರದೆಂದು ನಾನು ಹುಡುಕುವುದಕ್ಕೆ ಹೋದರೆ ನಾನು ಖಿರ್ಗೆಯವರದು ತಪ್ಪುಎಂದು ಹೇಳಬಹುದು. you are responsible. your Government is responsible. Your party is responsible.

Sri. M. Mallikarjuna Kharge : I will own that responsibility. If my Government was responsible. I will own that responsibility.

ಕಂಟೆಂಪ್ಟ್‌ಕೇಸ್ ನಮ್ಮ ಕಾಲದಲ್ಲಿ ಬಂದು ಅದನ್ನು ಇಂಪ್ಲಿಮೆಂಟ್ ಮಾಡದೆ ಈ ರೀತಿಯಾಗಿದೆಯೆಂದು ಹೇಳುತ್ತಿದ್ದೀರಿ. ನಿಮ್ಮ ಸರ್ಕಾರ ಬಂದು 10 ತಿಂಗಳಾಯಿತು. ನೀವು ಇದ್ದೀರಿ, ಇಪ್ಪತ್ತು ವರ್ಷಗಳ ಕಥೆಯನ್ನು ಹೇಳುತ್ತಾ ಹೋದರೆ ಹೇಗೆ ಇವತ್ತು ಏನು ಮಾಡಿದ್ದೀರಿ, ಅದು ಇಂಪಾರ್‌ಟೆಂಟ್ ಇದೆ. convication ಆಗಿದ್ದುದು ಮೊನ್ನೆ ಆಗಸ್ಟ್ ತಿಂಗಳಲ್ಲಿ Don't deviate,

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ನಾನು ಈಗ ಹೇಳಿದ ಕಾರಣಕ್ಕೋಸ್ಕರ ಈಗ ಅದನ್ನು ಚರ್ಚೆ ಮಾಡುವುದು ಬೇಡ, ನನಗೆ ಮಾಹಿತಿ ಇರುವ ಪ್ರಕಾರ ಇವತ್ತು ಸಂಜೆ ಅಥವಾ ನಾಳೆ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಈ ಸದನಕ್ಕೆ ಮುಚ್ಚಿಡುವಂಥಾದ್ದು ಏನೂ ಇಲ್ಲ. ಅವರು ಬಂದು ಯಾವ ಯಾವ ಮಟ್ಟದಲ್ಲಿ ಏನು ವಿಚಾರ ನಡೆಯಿತು. ಇದು ನಮ್ಮ ಸರ್ಕಾರದ ಒಬ್ಬ ಪ್ರಾಮಾಣಿಕವಾದ ಅಧಿಕಾರಿಗೆ ಶಿಕ್ಷೆಯಾಯಿತು ಎಂಬ ನೋವು ನಮಗೂ ಇದೆ. ಅವರಿಗೂ ಇದೆ. ಇದಕ್ಕೋಸ್ಕರ ಇದನ್ನು ಪೊಲಿಟಿಕಲ್ ಅಡ್‌ವಾನ್‌ಟೇಜ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು. ಇವತ್ತು ಸುಪ್ರೀಂ ಕೋರ್ಟ್ ಯಾವುದೊ ಒಂದು ಕಾರಣಕ್ಕೋಸ್ಕರ ಅವರು ಕೊಟ್ಟಿರುವಂತಹ ತೀರ್ಪು ತಪ್ಪು ಎಂದು ನಮ್ಮ ಮನಸ್ಸಿನಲ್ಲಿ ಭಾವನೆ ಇದ್ದರೂ ಅದನ್ನು ಹೇಳುವ ಹಾಗೆ ಇಲ್ಲ. That is your Constitution. That is what we are for it.

ಅದಕ್ಕೋಸ್ಕರ ಇದು ಚರ್ಚಾಸ್ಪದ ವಸ್ತುವಲ್ಲ. ಇದಕ್ಕೋಸ್ಕರ ನೀವು ರಾಜಿನಾಮೆ ಕೊಡಬೇಕು, ಮಾನ್ಯ ದೇವೇಗೌಡರು ರಾಜೀನಾಮೆ ಕೊಡಬೇಕು. ಎಂದು ಹೇಳುತ್ತಿದ್ದಾರೆ. ಮಾನ್ಯ ಕಲ್ಯಾಣಸಿಂಗ್ ಅವರ ಕೇಸ್‌ನಲ್ಲಿ ಕಲ್ಯಾಣಸಿಂಗ್‌ರವರ ಮೇಲೆ contempt case ಆಗಿದ್ದುದು. ಬೇರೆ ಯಾರ ಮೇಲೂ ಅಲ್ಲ. ಅದಕ್ಕೋಸ್ಕರ ಅವರು ಜೈಲಿಗೆ ಹೋದರು. ಒಬ್ಬ ಮುಖ್ಯ ಮಂತ್ರಿಗಳಾಗಿದ್ದವರು ಸುಪ್ರೀಂ ಕೋರ್ಟ್ ಆರ್ಡರ್

ಅನ್ನು ಒಬೆ ಮಾಡುವುದಕ್ಕೆ ಸ್ವತಃ ಅವರೇ ಜೈಲಿಗೆ ಹೋದರು. ನಮ್ಮ ಮುಖ್ಯಮಂತ್ರಿಯವರು ಅನ್ಯಾಯವಾಗಿ ಒಬ್ಬ ಅಧಿಕಾರಿಗೆ ಶಿಕ್ಷೆಯಾಯಿತಲ್ಲಾ ಎಂದು ರಾಷ್ಟ್ರಪತಿಯವರಿಗೆ ಮರ್ಸಿ ಪಿಟಿಷನ್ ಹಾಕುವುದಕ್ಕೆ ಹೋದರೆ ಅದನ್ನು ಅರ್ಥ ಮಾಡಿಕೊಳ್ಳದೆ ಇವರು ಕೂಗಾಡಿ ಬಿಟ್ಟರೆ ಅದಕ್ಕೆ ರೀತಿ ನೀತಿ ಬೇಡವೆ?

Sri. M. MALLOKARJUNA KHARGE : I am very sorry. ನಾವು ಕೂಗಾಡುವುದಕ್ಕೆ ಬಂದಿಲ್ಲ. ನಾವು ರಾಜಕೀಯ ಮಾಡಬೇಕಾದರೆ ಅದೇ ದಿನ ಮಾಡುತ್ತಿದ್ದೆವು. ನಮಗೂ ಕೂಡ ರಾಜಕೀಯ ಮಾಡುವುದಕ್ಕೆ ಬರುತ್ತದೆ. ಅದೇ ದಿವಸ ಮಾಡಬಹುದಾಗಿತ್ತು. ಆದರೂ ಕೂಡ ಒಬ್ಬ ಪ್ರಾಮಾಣಿಕ ಅಧಿಕಾರಿ ಒಳ್ಳೆಯವರು ಎಂಬ ಜನಾಭಿಪ್ರಾಯ ಏನಿತ್ತು ಅದನ್ನು ತಿಳಿದುಕೊಂಡೇ ನೀವು ಇಡೀ ವಿರೋಧ ಪಕ್ಷದವರನ್ನು ಮಾತನಾಡಲು ತಮ್ಮ ಚೇಂಬರ್‌ಗೆ ಕರೆದ ಮೇಲೆ ಎಲ್ಲರೂ ಹೋದರು. ನಾವು ರಾಜಕೀಯ ಮಾಡಬೇಕಾದರೆ ಆಗಲೇ ಇದನ್ನು ರಾಜಕೀಯ ಮಾಡಬಹುದಾಗಿತ್ತು. ಆದರೆ ನಾವು ರಾಜಕೀಯ ಮಾಡಲಿಲ್ಲ. ಇಲ್ಲಿ ಪ್ರಶ್ನೆ ಏನು ಬಂದಿದೆ ಎಂದರೆ ಅವರು ಜೈಲಿಗೆ ಹೋದ ಕಾರಣವೇನೆಂದರೆ ತಾವು ತಮಗೆ ಇಂಪ್ಲಿಮೆಂಟ್ ಮಾಡಬೇಕೆಂದು ಆದಶ ಕೊಟ್ಟರೂ ಕೂಡ ತಾವು ಆ ಫೈಲ್ ಇಟ್ಟುಕೊಂಡು ಅದರ ಮೇಲೆ ಏನೂ ಇನ್‌ಸ್ಟ್ರಕ್ಷನ್ಸ್ ಕೊಡದೆ ಅವರಿಗೆ ಕೇವಲ ಮುಖಾಮುಖಿ ಅಂದರೆ ಒರಲ್ ಇನ್‌ಸ್ಟ್ರಕ್ಷನ್ ಕೊಟ್ಟು ಇದೇ ರೀತಿ ನೀನು ಇದ್ದು ಬಿಡು ಎಂದು ಹೇಳಿ ಅದನ್ನು ಇಟ್ಟಿದ್ದಕ್ಕಾಗಿ ಮತ್ತು ಇಟ್ಟಿದ್ದನ್ನು ನೋಡಿಕೊಂಡು ನಿಮ್ಮ ಪಾರ್ಟಿಯವರೆ ಒಬ್ಬರು ಅಪ್ಲಿಕೇಶನ್ ಕೊಟ್ಟರು. ಸುಮಾರು ಎರಡು ಪೇಜ್ ಲೆಟರ್ ನಿಮಗೆ ಬರೆದರು. ಇದು ಸರಿಯಲ್ಲ,ಇದ್ನು ನಾವು ಇಂಪ್ಲಿಮೆಂಟ್ ಮಾಡಬೇಕೆಂದು ಹೇಳಿ ಆಗಸ್ಟ್ ತಿಂಗಳಲ್ಲಿ ಲೆಟರ್ ಬರೆದರು. ಅದೂ ಅಲ್ಲದೆ ಮೂರು ಜನ ಈ ಸದನದ ಎಂ.ಎಲ್.ಎ. ಗಳು ಅವರೂ ಕೂಡ ನಿಮ್ಮ ಪಾರ್ಟಿಯವರೇ.

(ಗೊಂದಲ)

Sri. P.G.R SCINDHIA : Sir, he is going into the merits of the case.

Sri. M. MALLIKATJUNA KHARGE : The question is closed. You have hanged him. I am telling about your acts. what you have done? How you have failed to take action? Why have you not acted according to the Supreme Court direction.

ಶ್ರೀ ಜೆ.ಹೆಚ್. ಪಾಟೀಲ್ : ವಾದಕ್ಕೋಸ್ಕರ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ಆರ್ಡರ್ ಮಾಡುವಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳುತ್ತಾರೆ.

Sri M. MALLIKARJUN KHARGE : You are defending wrong case. You are on wrong footing. Sir, he is defending wrong cas. His beloved Chief Minister has failed in this He himself has taken advantage of this to help his own people. That is why this senior IAS officer has gone to Jail.

ಶ್ರೀ ಜೆ.ಹೆಚ್. ಪಟೀಲ್ : ಅವರಿಗೆ ಏನಾದರೂ ಪಾಪ ಪ್ರಜ್ಞೆ ಇದ್ದರೆ ಹೇಳಿಕೊಳ್ಳಲಿ, ನನ್ನದೇನೂ ಬೇಡ, ತಪ್ಪು ಮಾಡಿದ್ದೇವೆ ಎಂದು ಅವರಿಗೆ ಗೊತ್ತಿದ್ದರೆ ಅವರು ಹೇಳಿಕೊಳ್ಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೇಳಿಕೊಳ್ಳುವುದೇನು. This is a clear case.

ಶ್ರೀ ಜೆ.ಹೆಚ್. ಪಟೇಲ್ : ನಾನು ಅಷ್ಟೇ ಕ್ಲಿಯರ್ ಆಗಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸುಪ್ರಿಂಕೋರ್ಟಿನಲ್ಲಿ ಏನು ಕೇಸಿದೆ?

ಶ್ರೀ ಜೆ.ಹೆಚ್. ಪಟೇಲ್ : ತಾವೇನು ಹೀಗೆ ಮಾತನಾಡುತ್ತಿದ್ದೀರಿ, ಸುಪ್ರೀಂಕೋರ್ಟಿನಲ್ಲಿ ನಾನೇನು ರಿವಿಜನ್ ಪಿಟಿಷನ್ ಇಡಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಪ್ರೀಂ ಕೋರ್ಟ್ ತೀರ್ಪಿನ ಮೆರಿಟ್ ಡಿ-ಮೆರಿಟ್‌ನಲ್ಲಿ ಹೋಗುತ್ತಾನೆ ಇಲ್ಲ, ನಾನು ಹೋಗಿದ್ದುದು ಏನೆಂದರೆ ನಿಮ್ಮ ಆಕ್ಷನ್ ಬಗ್ಗೆ ಅದಕ್ಕೆ ಮಾನ್ಯ ಅಧ್ಯಕ್ಷರೆ, you allow discussion under Rule 363 and we will discuss. Other wise if they are not ready, now you have to suspend because this is very important, for the first time it has happened.

ಅಧ್ಯಕ್ಷರು : ಇದು ನಿಮ್ಮ ಹಕ್ಕು, 363ರ ಕಳಿಗ ರೂಲನ್ನು ಸಸ್ಪೆಂಡ್ ಮಾಡಿ ಈ ವಿಚಾರದ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೀರಿ, ಆದರೆ ಬೇಡಿಕೆಗಳ ಮೇಲೆ ಚರ್ಚೆ ಪೂರ್ಣ ಆಗಿಲ್ಲ.

Sri. M. Mallikarjuna Kharge : No, No. This is very very important, issue The honour of the State is involved., This is very important ಆದರೆ ಇನ್ನೂ ನೀವು ಗಿಲೋಟಿನ್ ಹಾಕಬಹುದು ಪಾಸು ಮಾಡಿಕೊಡುತ್ತೀರಿ. But this is very important. ಇವತ್ತು ಆದಂಥ ಘಟನೆ ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಆಗಿಲ್ಲ, ದೇಶದಲ್ಲೂ ಆಗಿಲ್ಲ ಮತ್ತು ಈ ರೀತಿಯಾಗಿ ಮುಖ್ಯಮಂತ್ರಿಗಳು ಯಾರೂ ಕೂಡ ತಮಗೆ ತಾವು ಸಮರ್ಥಿಸಿಕೊಳ್ಳುವುದಕ್ಕೋಸ್ಕರ ಹೋಗುತ್ತಾರೊ .....ಯಾರು ಕೂಡ ಮಾಡಿಲ್ಲ.

ಅಧ್ಯಕ್ಷರು : ದಯಮಾಡಿ ನೋಡಿ ಮತ್ತೆ ನಾನು ತಮಗೆ ಹೇಳುತ್ತಿದ್ದೇನೆ. No discussion on this matter. We are taking up the demands.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನೀವು ಈ ರೀತಿಯಾಗಿ ಹೇಳಿದರೆ it is very difficult. ಏಕೆಂದರೆ, when they are ready ನಾವು ಏನೂ ಮುಚ್ಚಿಡುವುದಕ್ಕೆ ತಯಾರಿಲ್ಲ ನಾವು ಡಿಸ್ಕಷನ್‌ಗೆ ರೆಡಿ ಇದ್ದೇವೆ ಎಂದು ಅವರು ಹೇಳಿದರು. You allow it. we are ready to discuss it.

Mr. SPEAKER : Both of you may be mutually allowed. But I am not ready.

Sri M. MALLIKARJUNA KHARGE : The Government has failed to protect the imterest of one chief Engineer ಯಾವ ರೀತಿಯಾಗಿ ನಿಮ್ಮ ಕೆಲಸಕ್ಕಾಗಿ ಅಥವಾ ನೀವು ಮಾಡಿದಂಥ ಒಂದು ವಿಷಯಕ್ಕಾಗಿ ಬೇರೆಯವರು ಜೈಲಿಗೆ ಹೋಗಬೇಕಾಗಿದ್ದು ಇದನ್ನು ಹೇಳುತ್ತೇವೆ., not the Supreme Court judgement.

Mr. SPEAKER : I have given my ruling that we will not be inclined to take up this matter now by suspending rules under rule 363 we are taking up discussion on demands. Kindly co-operate.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ತಮಗೆ ಆಫೀಲ್ ಮಾಡುತ್ತೇನೆ, ಅಧ್ಯಕ್ಷರೆ ಅವರು ಉತ್ತರವನ್ನು ಕೊಡುವುದಕ್ಕೆ ರೆಡಿ ಇದ್ದಾರಲ್ಲ!

ಅಧ್ಯಕ್ಷರೆ : ನಾನು ಅದನ್ನೆ ಹೇಳಿದ್ದುದು, ಅವರು ತಾವು ಪರಸ್ಪರ ಅನೇಕ ವಿಚಾರಗಳಲ್ಲಿ ರೆಡಿ ಇರಬಹುದು ನಾನು ರೆಡಿ ಇಲ್ಲ. I want the discussion to be concluded today. Kindly co-operate with me. You are a senior member.

Sri M. MALLIKARJUNA KHARGE : Sir, with folded hand I request You, sir ನಾವೇನು ಪದೇ ಪದೇ ಬಂದು ಧರಣಿ ಮಾಡುವುದು, ಸುಮ್ಮಸುಮ್ಮನೆ ಸಭಾತ್ಯಾಗ ಮಾಡುವುದು ಮಾಡುವುದಿಲ್ಲ. ಆದರೆ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ. ಇದು ಬಹಳ ನಾಜೂಕಾದಂಥ ಪ್ರಶ್ನೆ, ಬಹಳ ಗಂಭೀರವಾದುದು. ಆಮೇಲೆ ಇದು ಯಾವುದೇ ರೀತಿಯಿಂದ ಸುಪ್ರಿಂ ಕೋರ್ಟ್‌ನ ಜಡ್ಜ್‌ಮೆಂಟ್ ಮೇಲೆ ಪರಿಣಾಮ ಬೀರುವುದಿಲ್ಲ, ಇದು ಕೇವಲ ನಿಮ್ಮ ಕಂಡಕ್ಟ್ ಮೇಲೆ ನಿಮ್ಮ ಸರ್ಕಾರದ ನಡವಳಿಕೆ ಮೇಲೆ ಮಾತ್ರ ನಾವು ಚರ್ಚೆ ಮಾಡುತ್ತೇವೆಯೇ ಹೊರತಾಗಿ ಬೇರೆ ಯಾವುದರ ಮೇಲೂ ಕೂಡ ಇಲ್ಲ.

ಶ್ರೀ ಜಿ.ಹೆಚ್. ಪಟೇಲ್ : ಅದಕ್ಕೋಸ್ಕರವೆ ನಾನು ಮಾನ್ಯ ಅಧ್ಯಕ್ಷರಿಗೆ, ಏನು ಹೇಳಿದೆ ಅಂದರೆ ಇದರ ಬಗ್ಗೆ ಪೂರ್ತಿ ಮಾಹಿತಿ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೋಸ್ಕರವೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ, ನಿಮ್ಮ ಹತ್ತಿರ ಫೈಲ್ ಇದೆ, ಬಾಕಿ ಎಲ್ಲಾ ವಿಷಯಗಳಿಗೂ ನೀವು ರಿಪ್ಲೈ ಮಾಡಬಹುದು ಅಂಥಾದ್ದರಲ್ಲಿ.....

ಶ್ರೀ ಜಿ.ಹೆಚ್. ಪಟೇಲ್ : ಅವರು ಈ ವಿಷಯದಲ್ಲಿ ಎಲ್ಲಾ all the dimensions of this problem is known to me ಅವರು ಅದಕ್ಕೋಸ್ಕರವೆ ದೆಹಲಿಗೆ ಹೋಗಿ ಮೂರು ದಿವಸ ಆಗಿದೆ, ಅವರು ನಾಳೆ ಬೆಳಿಗ್ಗೆ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ದೆಹಲಿಯಲ್ಲಿ ಸ್ಟಡಿ ಮಾಡುತ್ತಿದ್ದಾರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ನೀವು ಮಾಡಿಕೊಂಡು ಆಮೇಲೆ ದೇಶದ ಜನರಿಗೆ ಉತ್ತರ ಕೊಡಿ. ಇದು ಏನೆಂದರೆ, they are not ready, they are not open minded, ಏಕೆಂದರೆ ಅವರೇ ಮಾಡಿದ್ದನ್ನು ಅವರು ಸಮರ್ಥಿಸಿ ಕೊಳ್ಳುವುದಕ್ಕೋಸ್ಕರ ತಮ್ಮ ತೀರ್ಮಾನವನ್ನು ಸೇವ್ ಮಾಡುವುದಕ್ಕೋಸ್ಕರ ಮತ್ತು ಜನರಿಗೆ ಸಹಾಯ ಮಾಡುವುದಕ್ಕೋಸ್ಕರ ಈ ರೀತಿ ಮಾಡಿದ ಕೃತ್ಯಕ್ಕೆ ಬೇರೆಯವರಿಗೆ ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಇವತ್ತು ಕಳುಹಿಸಿದ್ದಾರೆ.ಅದಕ್ಕಾಗಿ ಇದರಿಂದಲೆ ಅವರಿಗೆ ಒಳ್ಳೆಯದಾಗುತ್ತಿತ್ತು ಅಂಥ ಅಂದರೆ ನಿಮಗೆ ಒಳ್ಳೆಯದಾಗಲಿ ಮತ್ತು ಈ ರೀತಿ ನಡವಳಿಕೆ ಇರತಕ್ಕಂಥದ್ದು ಚೆನ್ನಾಗಿಲ್ಲ. ಇದು ಯಾರಿಗೂ ಕೂಡ ಒಳ್ಳೆಯದಾಗತಕ್ಕಂಥದ್ದಲ್ಲ. ದಯವಿಟ್ಟು ಅಧ್ಯಕ್ಷರೆ,ಪುನಃ ತಾವು ಚರ್ಚೆಗೆ ಅವಕಾಶ ಕೊಟ್ಟರೆ ನಾವು ಕುಳಿತುಕೊಳ್ಳುತ್ತೇವೆ ಇಲ್ಲ ಅವರು ಕೊಡುವುದೇ ಇಲ್ಲ ಅಂಥ ಅಂದರೆ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀ ಸಗೀರ್ ಅಹಮದ್‌ರವರು ಹಾಗೂ ಕಾಂಗ್ರೆಸ್‌ನ ಇನ್ನಿತರ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವಸ್ತುಸ್ಥಿತಿ ಏನು ಎಂಬುದನ್ನಾದರೂ ನೀವು ಸದನಕ್ಕೆ ಹೇಳಬೇಕಲ್ಲ !

ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡಿ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಅಲ್ಲಲ್ಲ, ಬರೀ ಬಂಧನ ಆದದ್ದು ಹೇಳಿದರೆ ಆಗುವುದಿಲ್ಲ. ಅವರನ್ನು ಬಂಧಿಸಿದರು ಅಂಥ ಹೇಳಿದರೆ ಆಗುವುದಿಲ್ಲ, ಅದು ಎಲ್ಲರಿಗೂ ಗೊತ್ತಿದೆ. ಬಂಧನಕ್ಕೆ ಕಾರಣಗಳೇನು? ಮತ್ತು ಸರ್ಕಾರದ ವಿಚಾರಗಳೇನು? ಸರ್ಕಾರ ಎಲ್ಲೆಲ್ಲಿ ಎಡವಿದ್ದಾರೆ.

ಅಧ್ಯಕ್ಷರು : ತಾವು ಇರಲಿಲ್ಲ, ಇಷ್ಟೊತ್ತು ಅವರು ಅದನ್ನೇ ಪ್ರತಿಪಾದನೆ ಮಾಡಿದರು. ನಾನು ಅದಕ್ಕೆ ಅವರೆಲ್ಲರಿಗೂ ಹೇಳಿದ್ದೇನೆ.....

ಶ್ರೀ ವಾಟಾಳ್ ನಾಗರಾಜ್ : ಅವರು ಪ್ರತಿಪಾದನೆ ಮಾಡಿದರೆ ನಾನು ಮಾಡಿದಹಾಗೆ ಆಗುವುದಿಲ್ಲ.....

ಅಧ್ಯಕ್ಷರು : ಅದಕ್ಕೆ ತಮಗೂ ಸೇರಿಸಿ ನಾನೇನು ವಿನಂತಿ ಮಾಡುತ್ತಿದ್ದೇನೆಂದರೆ ಈ ವಿಚಾರವನ್ನು ನಾವು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನೋಟೀಸ್ ಕೊಟ್ಟರೆ ಸಮಯ ನಿಗಧಿ ಮಾಡೋಣ. ಬೇಡಿಕೆಗಳ ಮೇಲೆ ಹಲವಾರು ಜನ ಸದಸ್ಯರು ಭಾಗವಹಿಸುವುದಕ್ಕಾಗಿಲ್ಲ. ಆದ್ದರಿಂದ ಆ ವಿಚಾರವನ್ನು ಈಗ ಪ್ರಸ್ತಾಪ ಮಾಡುವುದು ಬೇಡ ಎಂದು ಹೇಳಿದೆ. ಅವರು ಅದಕ್ಕೆ ಸರ್ಕಾರದ ಧೋರಣೆ ಮೇಲೆ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಸರ್ಕಾರದ ಧೋರಣೆ ಏನು? ಅದು ಏನೇನಾಗಿದೆ ಅಂಥ ಹೇಳಬೇಕಲ್ಲ.....

ಅಧ್ಯಕ್ಷರು : ಈಗ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಛೆ ಛೆ ನಾನು ಇರುವ ಪ್ರಶ್ನೆಯಲ್ಲ, ಇದಕ್ಕೆ ಆ ಕಾಗದ ಪತ್ರಗಳೇನು? ವ್ಯವಹಾರಗಳೇನು? ಗೊತ್ತಾಗಬೇಕಲ್ಲ.

ಅಧ್ಯಕ್ಷರು : ಅದಕ್ಕೆ ಬೇರೆ ನೋಟೀಸ್ ಕೊಡಲಿ ಚರ್ಚೆ ಮಾಡೋಣ. ಯಾವ ನಿಯಮದ ಕೆಳಗೆ ತೆಗೆದುಕೊಳ್ಳಬೇಕು ಎಂದು ನೋಟೀಸ್ ಕೊಟ್ಟರೆ ಅದನ್ನು ಚರ್ಚೆ ಮಾಡಿ ಯಾವ ರೀತಿ ನಾವು ಅವಕಾಶ ಮಾಡಿಕೊಡಬೇಕು ಎಂದು ನಿಯಮಾವಳಿ ಪ್ರಕಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :ನಿಮ್ಮ ಮಾತಿನ ಬಗ್ಗೆ ನಾನು ತಿರಸ್ಕರಿಸುತ್ತಾ ಇಲ್ಲ. ಆದರೆ ಒಂದು ಮುಖ್ಯಮಂತ್ರಿಗಳು ನಾಲ್ಕು ದಿವಸಗಳಿಂದ ಇರಲಿಲ್ಲ,ಅದಕ್ಕೂ ನೀವು ನೋಟೀಸ್ ಕೊಡಬೇಕು ಎನ್ನುತ್ತೀರಾ? ಹೇಳಿ. ಈ ಸದನ ನಡೆಯುವಾಗ ನಾಲ್ಕು ದಿನ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, ಮುಖ್ಯಮಂತ್ರಿಗಳು ಇಲ್ಲ ಅನ್ನುವುದಕ್ಕೆ ತಾವು ಒಂದು ನೋಟೀಸ್ ಕೊಡಬೇಕು ಎನ್ನುವುದಾದರೆ ನನ್ನದೇನು ಅಭ್ಯಂತರ ಇಲ್ಲ. ಏಕೆಂದರೆ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ನಾಲ್ಕು ದಿನ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ ಕಾರಣವೇನು? ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ದೆಹಲಿಯಲ್ಲಿದ್ದಾರೆ, ಗೃಹಮಂತ್ರಿಗಳನ್ನು ಕಂಡರು ರಾಷ್ಟ್ರಪತಿಗಳನ್ನು ಕಂಡರು, ಈಗ ಎಲ್ಲರನ್ನೂ ಭೇಟಿ ಮಾಡುತ್ತಿದ್ದಾರೆ ಅಂಥ ಸುದ್ದಿ ನೋಡುತ್ತಿದ್ದೇವೆಯೆ ಹೊರತು ಈ ಸದನದಲ್ಲಿ ಮುಖ್ಯಮಂತ್ರಿಗಳು ಇಲ್ಲ. ಅದರ ಬಗ್ಗೆ ತಾವು.....

ಶ್ರೀ ಜೆ.ಹೆಚ್. ಪಟೇಲ್ : ತಾವು ಇರಲಿಲ್ಲ, ನಾನು ಹೇಳಿದೆ, ನಮ್ಮ ರಾಜ್ಯಸರ್ಕಾರದ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಈ ತರಹ ಆಯಿತು, ಯಾವ

ಕಾರಣಕ್ಕೆ ಶಿಕ್ಷೆ ಆಯಿತು ಅದಕ್ಕೆ ಯಾರು ಕಾರಣರು ಆ ವಿಷಯಗಳಿಗೆ ಹೋಗದೆ ಸರ್ವೋಚ್ಚ ನ್ಯಾಯಾಲಯದ ಆಜ್ಞೆಗೆ ತಲೆಬಾಗಿ ಇಂತಹ ಸ್ಥಿತಿ ಬರಬಾರದು ಅಂತೇಳಿ ಮೂರು ದಿವಸದ ಹಿಂದೆ ಹೋಗಿ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ಕಾನೂನು ಮಂತ್ರಿಗಳು, ಗೃಹಮಂತ್ರಿಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನೆಲ್ಲ ಕಂಡು ಈ ಅನ್ಯಾಯ ಆಗಬಾರದು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಇಲ್ಲಿ ಯಾರೋ ಇದಕ್ಕೆ ಸರ್ಕಾರ ಹೊಣೆ ಅಂಥ ಹೇಳಿದರೆ ನಾವು ಅದಕ್ಕೆ ಉತ್ತರವನ್ನು ಕೊಡುತ್ತೇವೆ. ಆ ಮಾತು ಬೇರೆ, ಸರ್ಕಾರ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಸರ್ವಪ್ರಯತ್ನ ಮಾಡಿದ್ದಾರೆ. ಅದಕ್ಕೋಸ್ಕರ ಇದು ಬಹಳ ಸೂಕ್ಷ್ಮವಾದ ವಿಷಯ, ಅವರು ಬರಲಿ, ನಾಳೆ ಬಂದ ತಕ್ಷಣ ಅವರು ಸದನಕ್ಕೆ ಏನು ಹೇಳಬೇಕು, ಸಂವಿಧಾನದಲ್ಲಿ ಏನು ಹೇಳಲಿಕ್ಕೆ ಸಾಧ್ಯ ಅದನ್ನೆಲ್ಲ ಹೇಳುತ್ತಾರೆ. We cannot also comment on the Supreme Court judgement. ಇದರೊಳಗೆ ಬಹಳ ಸೂಕ್ಷ್ಮತೆ ಇದೆ ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದ್ದರಿಂದ ನಾವು ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರೆಸಿಕೊಂಡು ಹೋಗಬಹುದು.

ಶ್ರೀ ವಾಟಾಳ್ ನಾಗರಾಜ್ : ನನಗನಿಸತಕ್ಕಂಥದ್ದು, ಇದು ಇಷ್ಟರಲ್ಲೆ ಮುಗಿಯುವಂತದ್ದಲ್ಲ, ಇದರ ಸಮಗ್ರ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ ಇದು ಅಷ್ಟು ಸುಲಭವಾಗಿ ಮುಗಿಯುವಂತದ್ದಲ್ಲ, ಆದ್ದರಿಂದ ತಾವು ನಾಳೆಯಾದರು ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು : ನಾನು ನಾಳೆ ತೆಗೆದುಕೊಳ್ಳುತ್ತೇನೆ, ನಾಡಿದ್ದು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾ ಇಲ್ಲ, ನನ್ನ ಕಛೇರಿಗೆ ಏನು ನೋಟೀಸ್ ಬರುತ್ತದೆ, ಯಾವ ಸದಸ್ಯರು ಏನು ನೋಟೀಸ್‌ಕೊಡುತ್ತಾರೆ ಎಂಬುದರ ಮೇಲೆ ಆ ಕಾಲಂ ನೋಡುತ್ತೇನೆ, ಅದರ ಪ್ರಕಾರ ಏನು ಅವಕಾಶ ಮಾಡಿಕೊಡಬೇಕೋ ಹಾಗೆ ನಾನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ನೀತಿಯ ಪ್ರಕಾರವೆ ನಾನು ಹೇಳಿದೆ. ಸರ್ಕಾರಕ್ಕೆ ತಮ್ಮ ಮೂಲಕ ಏನು ಹೇಳುತ್ತೇನೆ ಅಂದರೆ, ಈ ಬಗ್ಗೆ ಸರ್ಕಾರವೆ ನೇರವಾಗಿ ಚರ್ಚೆಗೆ ಬರಬೇಕು. ನಮ್ಮ ಸರ್ಕಾರ ಏನೇನು ಮಾಡಿದೆ ಏನೇನು ಪರಿಸ್ಥಿತಿ ಆಗಿದೆ, ವಾಸುದೇವನ್ ಬಗ್ಗೆ ನಾವು ಹೇಗೆ ನಡೆದುಕೊಂಡಿದ್ದೇವೆ, ಯಾವ ಯಾವ ರೀತಿ, ಅದರ ಕಡತಗಳೇನು? ಇದೆಲ್ಲವನ್ನು ಸರ್ಕಾರ ಸಭೆ ನಡೆಯುವಾಗ.....

ಅಧ್ಯಕ್ಷರು : ಚರ್ಚೆಗೆ ತೆಗೆದುಕೊಂಡಾಗ ಅವೆಲ್ಲಾ ಮಾಡೋಣ. ಈಗ ಅವರಿಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಯಾರಿಗೂ ಅವಕಾಶವೆ ಸಿಗಲಿಲ್ಲ. ದಯಮಾಡಿ ಬೇಡಿಕೆಯ ಮೇಲಿನ ಚರ್ಚೆಯನ್ನು ಮುಂದುವರೆಸಿ.

2.30 ಪಿ.ಎಂ.

ವಿತ್ತೀಯ ಕಾರ್ಯಕಲಾಪಗಳು

Discussion on demands for grants for the year 1995-96

+ Sri Qamarul Islam (Gulbarga) : Mr. Speaker Sir, There are sixteen items of Demands for discussion today and I am aware that you have given me 20 minutes. I have select only a few Demands and I wish to discuss on the Demands of Education Department. As we all know, primary education is compulsory under the directive principles of the Constitution and in the year 1986, a National Educational Policy was adopted.

(Mr. Deputy Speaker Sri. M.S. Patil In the Chair)